KARC210023732017

Presented on : 31-08-2014
Registered on : 31-08-2014
Decided on : 01-07-2026
Duration : 11 years, 10 months, 01 days

**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ,**
**ದೇವದುರ್ಗ.**

**ಉಪಸ್ಥಿತರು ಃ ಶ್ರೀ ರಫೀಕ್ ಅಹಮದ್., ಬಿಎ., ಎಲ್.ಎಲ್.ಬಿ.,**
**ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,**
**ದೇವದುರ್ಗ.**

**ಸಿ.ಸಿ.ನಂ ಃ 203/2017**

**ದಿನಾಂಕ** 01 ನೇ ಜುಲೈ-2026.

**ಪಿರ್ಯಾದಿದಾರರು** ಃ ರಾಜ್ಯ ಸರ್ಕಾರದ ಪರವಾಗಿ,
ಠಾಣಾ ಅಮಲ್ದಾರರು
ದೇವದುರ್ಗ. ಪೊಲೀಸ್ ಠಾಣೆ, ದೇವದುರ್ಗ.

(ಸರ್ಕಾರಿ ಅಭಿಯೋಜಕರು)

**ವಿರುದ್ಧ**

ಆರೋಪಿತರು ಃ 1. ಅಮರೇಶ ತಂದೆ ಷರಕ್ಷರಪ್ಪಗೌಡ ಮಾಲಿ ಗೌಡರು,
ವಯಸ್ಸು 37 ವರ್ಷ, ಉದ್ಯೋಗ : ಒಕ್ಕಲುತನ,
ಸಾಃ ಹರವಿ ಗ್ರಾಮ ತಾಃ ಮಾನವಿ.

(ಶ್ರೀ ವಿ.ಎಮ್.ಎಮ್., **ವಕೀಲರು**)

2. ಬೂದೆಪ್ಪ ತಂದೆ ಗೂಳಪ್ಪ ಹದ್ದಿನಾಳನವರ, (ಮೃತಪಟ್ಟಿರುತ್ತಾರೆ)
ವಯಸ್ಸು 48 ವರ್ಷ, ಉದ್ಯೋಗ : ಒಕ್ಕಲುತನ,
ಸಾಃ ಹದ್ದಿನಾಳ, ಹಾವ ಕೋಣಚೆಪ್ಪಳಿ.

3. ಮೆಹಬೂಬ ತಂದೆ ಮೋತಿಸಾಬ, (ಮೃತಪಟ್ಟಿರುತ್ತಾರೆ)
ವಯಸ್ಸು 37 ವರ್ಷ, ಉದ್ಯೋಗ : ಲೈನ್‌ಮೆನ್ ,
ಸಾಃ ದೊಂಡಂಬಳ್ಳಿ,

| | |
|---|---|
| **ಅಪರಾಧವು ಘಟಿಸಿದ ದಿನಾಂಕ** | ಃ 31-08-2014 |
| **ಆರೋಪಿತರ ಹಾಜರಾತಿಯ ದಿನಾಂಕ** | ಃ 10-11-2014 |
| **ಫಿರ್ಯಾದುದಾರರ ಹೆಸರು** | ಃ ಶಿವಪ್ಪ |
| **ಸಾಕ್ಷಿ ವಿಚಾರಣೆಯನ್ನು ಪ್ರಾರಂಭಿಸಿದ ದಿನಾಂಕ** | ಃ 24-05-2023 |
| **ಸಾಕ್ಷಿ ವಿಚಾರಣೆಯನ್ನು ಮುಕ್ತಾಯಗೊಳಿಸಿದ ದಿನಾಂಕ** | ಃ 06-04-2026 |
| ಆರೋಪಿತರ **ವಿರುದ್ಧ ಹೊರಿಸಿದ ಆರೋಪಗಳು** | ಃ ಭಾರತೀಯ ದಂಡ ಸಂಹಿತೆ ಕಲಂ 304(ಎ) . |
| **ನ್ಯಾಯಾಲಯದ ತೀರ್ಮಾನ** | ಃ ಆರೋಪಿತರು ಬಿಡುಗಡೆಗೊಂಡಿರುತ್ತಾರೆ. |
| ಫಿರ್ಯಾದಿ ಪರ ಪ್ರತಿನಿಧಿಸಿದವರು | ಃ ಸರ್ಕಾರಿ ಅಭಿಯೋಜಕರು |
| ಆರೋಪಿತರ ಪರ ಪ್ರತಿನಿಧಿಸಿದವರು | ಃ **ಶ್ರೀ** ವಿ.ಎಮ್.ಎಮ್., ವಕೀಲರು |

***ಃಃ ತೀರ್ಪು ಃಃ***

ಆರಕ್ಷಕರ ಉಪನಿರೀಕ್ಷಕರು ದೇವದುರ್ಗ ಪೊಲೀಸ್ ಠಾಣೆ, ದೇವದುರ್ಗ ಇವರು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 304(ಎ) ರೀತ್ಯಾ ಅಪರಾಧ ಎಸಗಿರುತ್ತಾರೆಂದು ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**2. ಈ ಪ್ರಕರಣದ ಸಂಕ್ಷಿಪ್ತ ಸಾರಾಂಶ ಏನೆಂದರೆಃ-**

ದೇವದುರ್ಗ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿರುವ ಕೋಣಚಪ್ಪಳಿ ಗ್ರಾಮದ ಸೀಮೆಯಲ್ಲಿ ದಿನಾಂಕ 31-08-2014 ರಂದು ಬೆಳಿಗ್ಗೆ 07-45 ಗಂಟೆಯ ಸುಮಾರಿಗೆ ಜಮೀನು ಸರ್ವೆ ನಂ.10 ರಲ್ಲಿ ಸೋಲಾರ್ ಅಳವಡಿಸಿದ್ದ ತಂತಿ ಮೇಲೆ ಹತ್ತಿರದಲ್ಲಿನ ಶ್ರೀ. ಶಿವನಗೌಡ ಆಣೇರ ಇವರ ಬೀಳು ಬಿದ್ದ ಹೊಲದಲ್ಲಿನ ಜೆಸ್ಕಾಂ ವಿದ್ಯುತ್ ಕಂಬಗಳು ಬಿದ್ದಿದ್ದರ ಪರಿಣಾಮವಾಗಿ ಸದರಿ ಸೋಲಾರ್ ತಂತಿಯಲ್ಲಿ ವಿದುತ್ ಹರಿದಿದ್ದು, ಸಾಕ್ಷಿ ನಂ.1 ನೇದ್ದವರ ಮಗ ಶರಣಬಸವ ವಯಾ 16 ವರ್ಷ ಇತನು ಸಾಕ್ಷಿ ನಂ.3 ಮತ್ತು 4 ನೇಯವರೊಂದಿಗೆ ದನಕರುಗಳಿಗೆ ಮೇವು ಮಾಡಿಕೊಂಡು ಸದರಿ ಸೋಲಾರ ತಂತಿಯನ್ನು ದಾಟುವಾಗ್ಗೆ ತಂತಿ ತಗುಲಿ ವಿದ್ಯುತ್ ಶಾಕ್ ಆಗಿದ್ದರಿಂದ ಸ್ಥಳದಲ್ಲಿಯೇ ಮರಣ ಹೊಂದಿದ್ದು, ತನಿಖೆಯಿಂದ ಸದರಿ ಶ್ರೀ. ಶಿವನಗೌಡ ಆಣೇರ ಇವರ ಜಮೀನಿನಲ್ಲಿ ವಿದ್ಯುತ್ ಕಂಬಗಳು 3 ದಿನಗಳಿಂದೆಯೇ ಬಿದ್ದಿದ್ದರೂ ಸೋಲಾರ್ ಅಳವಡಿಸಿ ಹೊಲ ಸರ್ವೆ ನಂ. 10 ರ ಮಾಲೀಕರರಾದ ಅಪಾದಿತ ನಂ.1 ಮತ್ತು ಆ ಹೊಲವನ್ನು ಸಾಗುವಳಿ ಮಾಡುತ್ತಿದ್ದ ಅಪಾದಿತ ನಂ.2 ಹಾಗೂ ವಿದ್ಯುತ್ ಕಂಬಗಳು ಬಿದ್ದ ಲೈನಿನ ನಿಗಾ ವಹಿಸಬೇಕಾದ ಅಪಾದಿತ ನಂ.3 ಇವರು ಅದನ್ನು ಸರಿ ಪಡಿಸದೇ ಅಲಕ್ಷತನ ಮಾಡಿದ್ದರಿಂದ ಈ ಘಟನೆ ಜರುಗಿ ಶರಣಬಸವ ತಂದೆ ಶಿವಪ್ಪ, ಇತನ ಮರಣ

ಉಂಟಾಗಿರುವುದ ದೃಢಪಟಿದ್ದು ಎಂದು ಚಾಸಾ.1 ರವರು ಲಿಖಿತ ದೂರನ್ನು ಸಲ್ಲಿಸಿದ್ದು. ಸದರಿ ದೂರಿನ ಆಧಾರದ ಮೇಲೆ ದೇವದುರ್ಗ ಪೊಲೀಸರು ಠಾಣಾ ಮೊ.ನಂ.149/2014 ರಲ್ಲಿ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖಾಧಿಕಾರಿಯು ತನಿಖೆ ಪೂರೈಸಿ ಆರೋಪಿತರ ವಿರುದ್ದ ಮೇಲ್ಕಂಡ ಕಲಂ ಗಳ ಅನ್ವಯ ದೋಷಾರೋಪಣ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ಅಭಿಯೋಜನಾ ಪಕ್ಷದವರು ಆರೋಪಿತರ ವಿರುದ್ದ ಸಲ್ಲಿಸಿರುವ ದೋಷಾರೋಪಣ ಪತ್ರ ಮತ್ತು ಅಭಿಯೋಜನೆಯ ದಾಖಲೆಗಳನ್ನು ಪರಿಶೀಲಿಸಿ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಎಸಗಿದ ಅಪರಾಧಗಳಿಗೆ ಸಂಜ್ಞೇಯತೆ ತೆಗೆದುಕೊಳ್ಳಲಾಯಿತು. ಪ್ರಕರಣ ವಿಚಾರಣೆ ಹಂತದಲ್ಲಿ 3 ನೇ ಆರೋಪಿತನು ಮೃತಪಟ್ಟಿದ್ದು ಅವರ ವಿರುದ್ಧ ಪ್ರಕರಣ ರದ್ದಾಗಿರುತ್ತದೆ . ನ್ಯಾಯಾಲಯದ ಸಮನ್ಸ್ ನ ಅನ್ವಯ 1 ಮತ್ತು 2 ನೇ ಆರೋಪಿತರು ನ್ಯಾಯಾಲಯದ ಮುಂದೆ ಹಾಜರಾಗಿ ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ದಂಡ ಪ್ರಕ್ರಿಯ ಸಂಹಿತೆಯ ಕಲಂ 207 ರಡಿಯಲ್ಲಿ 1 ಮತ್ತು 2 ನೇ ಆರೋಪಿತರಿಗೆ ಅಭಿಯೋಜನೆಯ ಕಾಗದ ಪತ್ರಗಳನ್ನು ನೀಡಲಾಯಿತು. 1 ಮತ್ತು 2 ನೇ ಆರೋಪಿತರಿಗೆ ಅವರ ಮೇಲಿನ ದೋಷಾರೋಪಣೆಗಳನ್ನು ರಚಿಸಿ ಓದಿ ಹೇಳಲಾಯಿತು. 1 ಮತ್ತು 2 ನೇ ಆರೋಪಿತರು ತಾವು ಏನು ತಪ್ಪು ಮಾಡಿಲ್ಲವೆಂದು ಹಾಗೂ ಪ್ರತಿರಕ್ಷೆ ಇದೆ ಎಂದು ಹೇಳಿ ವಿಚಾರಣೆ ಬಯಸಿರುತ್ತಾನೆ. ಆದ್ದರಿಂದ ಅಭಿಯೋಜನೆಗೆ 1 ಮತ್ತು 2 ನೇ ಆರೋಪಿತರ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಅವಕಾಶ ನೀಡಲಾಯಿತು. ನಂತರ ಸಾಕ್ಷಿದಾರರ ವಿಚಾರಣೆಯ ಹಂತದಲ್ಲಿ 2 ನೇ ಆರೋಪಿತನು ಮರಣ ಹೊಂದಿರುತ್ತಾನೆ. ಆತನ ವಿರುದ್ಧ ಪ್ರಕರಣ ರದ್ದಾಗಿರುತ್ತದೆ.

**4.** ಈ ಪ್ರಕರಣದಲ್ಲಿ 1 ನೇ ಆರೋಪಿತನ ವಿರುದ್ದ ಹೊರಿಸಿದ ಅಪರಾಧಗಳನ್ನು ರುಜುವಾತು ಪಡಿಸಲು ಸಾಕ್ಷಿದಾರರಾದ ಪ್ರಾಸಾ.1 ರಿಂದ ಪ್ರಾಸಾ.11 ಎಂದು ವಿಚಾರಣೆಗೊಳಪಡಿಸಿ ಹಾಗೂ ನಿ.ಪಿ-1 ರಿಂದ 15 ರಂತಿರುವ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಸಾಕ್ಷಿದಾರರಾದ ಪ್ರಾಸಾ.1 ರಿಂದ ಪ್ರಾಸಾ.11 ಎಂದು ವಿಚಾರಣೆ ಮಾಡಿರುತ್ತಾರೆ.

**5.** ಸಿ.ಆರ್.ಪಿ.ಸಿ.ಕಲಂ 313 ರಲ್ಲಿ 1 ನೇ ಆರೋಪಿತನ ಹೇಳಿಕೆಯನ್ನು ದಾಖಲಿಸಲಾಯಿತು. ಸಾಕ್ಷಿದಾರರು 1 ನೇ ಆರೋಪಿತನ ವಿರುದ್ದ ಹೇಳಿದ ಸಾಕ್ಷ್ಯವನ್ನು 1 ನೇ ಆರೋಪಿತನ ಅಲ್ಲಗೆಳೆದು ತನ್ನ ಪರ ಯಾವುದೇ ಸಾಕ್ಷಿ ವಿಚಾರಣೆ ಇರುವುದಿಲ್ಲ ಎಂದು ಹೇಳಿರುತ್ತಾರೆ.

**6.** ಉಭಯ ಪಕ್ಷಗಳ ವಾದ ವಿವಾದಗಳನ್ನು ಕೇಳಲಾಗಿ ನನ್ನ ವಿವೇಚನೆಗೆ ಈ ಕೆಳಕಂಡತೆ ಅಂಶಗಳು ಉದ್ಬವಿಸುತ್ತವೆ.

**-:: ಅಂಶಗಳು ::-**

**a. ಅಂಶ ನಂ.1** :- ದಿನಾಂಕ 31-08-2014 ರಂದು ಬೆಳಿಗ್ಗೆ 7-45 ಗಂಟೆಗೆ ದೇವದುರ್ಗ ಪೊಲೀಸ ಠಾಣಾ ವ್ಯಾಪ್ತಿಯ ಕೋಣಚಿಪ್ಪಳಿ ಗ್ರಾಮದ ಸೀಮೆಯಲ್ಲಿ ಇರುವ 1 ನೇ ಆರೋಪಿತನಾದ ನೀನು ನಿನ್ನ ಜಮೀನು ಸರ್ವೆ ನಂ.10 ಇದ್ದು ಈಗ ಸದರಿ ಜಮೀನನ್ನು 2 ನೇ ಆರೋಪಿತನಾದ ನೀನು ಸಾಗುವಳಿ ಮಾಡುತ್ತಿದ್ದು ಹಾಗೂ ಸದರಿ ಜಮೀನಿನಲ್ಲಿ ದನಕರಗಳಿಗೆ ಅಥವಾ ಮನುಷ್ಯರು ಬರದ ಹಾಗೆ ಇರಲು ನೀವು ಸೋಲಾರ್ ತಂತಿಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಪರವಾನಿಗೆಯನ್ನು ಪಡೆಯದೆ ಹಾಕಿದ್ದರು ಹಾಗೂ ಸದರಿ ಜಮೀನಿನಲ್ಲಿ 3 ದಿನಗಳ ಹಿಂದೆ ವಿದ್ಯುತ್ ಕಂಬಗಳು ಸೋಲಾರ್ ತಂತಿಗಳ ಮೇಲೆ ಬಿದ್ದಿರುವ ವಿಷಯ ನಿಮಗೆ ಗೊತ್ತಿದ್ದರು ಸಹ ಈ ವಿಷಯವನ್ನು ಕೆ.ಇ.ಬಿ. ಅಧಿಕಾರಿಗಳಿಗೆ ತಿಳಿಸದೆ ಇರುವ ಕಾರಣ ಚಾಸಾ-1 ರವರ ಮಗನಾದ ಶರಣಬಸವ ತಂದೆ ಶಿವಪ್ಪ ಈತನು ಸೋಲಾರ್ ತಂತಿಯನ್ನು ದಾಟುವಾಗ ಆತನಿಗೆ ತಂತಿ ತಗಲಿ ವಿದ್ಯುತ್ ಶಾಕ್ ನಿಂದ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ ಇದಕ್ಕೆ ನಿಮ್ಮ ನಿರ್ಲಕ್ಷತನದಿಂದ ಚಾಸಾ-1 ರವರ ಮಗನ ಮರಣವನ್ನುಂಟು ಮಾಡಿರುತ್ತೀರಿ, ಆದ್ದರಿಂದ ಭಾರತೀಯ ದಂಡ ಸಂಹಿತೆಯ ಕಲಂ 304 (ಎ) ರಡಿಯಲ್ಲಿ ಆರೋಪಿತನು ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತು ಪಡಿಸಿರುವರೆ?

**b. ಅಂಶ ನಂ.2 :- ಯಾವ ಆದೇಶ?**

**7. ಮೇಲ್ಕಂಡ ಅಂಶಗಳನ್ನು ನಾನು ಈ ಕೆಳಕಂಡಂತೆ ಕಾಣಿಸಿರುವ ಕಾರಣಗಳಾಗಿ ಈ ರೀತಿ ಉತ್ತರಿಸುತ್ತೇನೆ.**

**ಅಂಶ ನಂ 1 : ಸಕರಾತ್ಮಕವಾಗಿ.**

**ಅಂಶ ನಂ 2 : ಅಂತಿಮ ಆದೇಶದ ಪ್ರಕಾರ ಈ ಕೆಳಕಂಡಂತೆ.**

**:: ಕಾರಣಗಳು ::**

**8. ಅಂಶ ನಂ.1 :-** ಅಭಿಯೋಜನೆಯ ಪ್ರಕರಣದ ಸಾರಾಂಶವನ್ನು ಈ ತೀರ್ಪಿನ ಮೊದಲ ಹಂತದಲ್ಲೆ ನಮೂದಿಸಿದ್ದು ಮತ್ತೆ ಪುನರಾವರ್ತನೆಯನ್ನು ತಪ್ಪಿಸಲು ಈ ಹಂತದಲ್ಲಿ ನಮೂದಿಸಿರುವುದಿಲ್ಲ.

ಈ ಪ್ರಕರಣದಲ್ಲಿ ಮುಖ್ಯವಾಗಿ ಅಭಿಯೋಜನೆಯ ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸಬೆಕಾಗುತ್ತದೆ.

ಅದೇ ರೀತಿ ಭಾ.ದಂ.ಸಂ.ಕಲಂ.304(ಎ) ರೀತ್ಯ ಅಪಘಾತವಾಗಬೇಕಾದರೆ ಈ ಕೆಳಕಂಡ ಘಟಕಾಂಶಗಳನ್ನು ರುಜುವಾತುಪಡಿಸತಕ್ಕದ್ದು.

1. ಒಬ್ಬ ವ್ಯಕ್ತಿಯು ಮರಣ ಪಟ್ಟಿರುತ್ತಾನೆ ಅಥವಾ ನರ ಹತ್ಯೆ ಆತದೆ.

2. ಆಪಾದಿತನು ಆ ವ್ಯಕ್ತಿಯ ಮರಣ ಉಟಿಟುಮಾಡಿದನು.

3. ಆಪಾದಿತನು ಮಾಡಿದ ದುಡುಕಿನ ಅಥವಾ ನಿರ್ಲಕ್ಷ್ಯದಿಂದ ಆ ವ್ಯಕ್ತಿಯ ಮರಣ ಉಂಟಾಯಿತು ಎಂಬ ಅಂಶವನ್ನು ರುಜುವಾತು ಪಡಿಸಬೇಕಾಗುತ್ತದೆ.

**9.** ಅಭಿಯೋಜನೆಯು ಸದ್ರಿ ಪ್ರಕರಣವನ್ನು ರುಜುವಾತು ಪಡಿಸಲು ಮೊದಲಿಗೆ ಈ ಪ್ರಕರಣದ ಫಿರ್ಯಾಧಿ ಸಾಕ್ಷಿದಾರರಾದ ಚಾಸಾ-1 ಶಿವಪ್ಪ ರವರನ್ನು ಪ್ರಾಸಾ-1 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, 1 ಮತ್ತು 2 ನೇ ಆರೋಪಿತರ ಪರಿಚಯ ತನಗೆ ಇದ್ದು. ಚಾಸಾ-2 ರಿಂದ 9 ರವರ ಪರಿಚಯ ತನಗೆ ಇದ್ದು. ಕಳೆದ 9 ವರ್ಷಗಳ ಹಿಂದೆ ತನ್ನ ಮಗನಾದ ಶರಣಬಸಪ್ಪ ಈತನು ರವಿವಾರದಂದು ಜಮೀನಿನಲ್ಲಿ ಮೇವನ್ನು ತರಲು ಹೋಗಿದ್ದನು ರಾತ್ರಿಯಿಡಿ ಮಳೆಯಾಗಿತ್ತು, ಅಮರೇಗೌಡರವರ ಗದ್ದೆಯಲ್ಲಿ ದನಕರಗಳು ಬರದಂತೆ ನೋಡಿಕೊಳ್ಳಲು ಸೋಲಾರ್ ಅಳವಡಿಸಿದ್ದರು ಅದರ ಮೇಲೆ ಕೆ.ಇ.ಬಿ.ಯ ಕಂಬ ಬಾಗಿತ್ತು. ಆ ಕಾರಣ ಸದರಿ ಕಂಬದ ವಿದ್ಯುತ್ ತಂತಿಯು ಸೋಲಾರ್ ವೈರಿನ ಮೇಲೆ ಬಿದ್ದಿತು. ತನ್ನ ಮಗನು ಸೋಲಾರ್ ವೈರನ್ನು ಬಗ್ಗಿ ಬರುವಾಗ ವಿದ್ಯುತ್ ಸ್ಪರ್ಷವಾಗಿ ತನ್ನ ಮಗನು ಮೃತಪಟ್ಟಿದ್ದು. ತನ್ನ ಅಳಿಯನಾದ ನಿಂಗಪ್ಪನು ಈ

ವಿಷಯವನ್ನು ತನಗೆ ತಿಳಿಸಿದ ನಂತರ ತಾನು ಘಟನಾ ಸ್ಥಳಕ್ಕೆ ಹೋಗಿದ್ದೆ. ತಾನು ದೂರನ್ನು ಕೊಟ್ಟಿದ್ದು. ಅದೇ ರೀತಿ ತಾನು ಪುರವಣಿಗೆ ಹೇಳಿಕೆಯನ್ನು ನೀಡಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**10.** ಪ್ರಾಸಾ.1 ರವರನ್ನು 1ನೇ ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ನಾನು ದೂರನ್ನು ಬಾಯಿಮಾತಿನಿಂದ ಹೇಳಿದ್ದೆ. ಪೋಲಿಸ್ ಠಾಣೆಗೆ ನಾವು 7-8 ಜನರು ಕೂಡಿ ಬಂದಿದ್ದೆವು. ದೂರಿನಲ್ಲಿ ಯಾರ ಹೆಸರನ್ನು ನಾನು ತೋರಿಸಿರುವುದಿಲ್ಲ. ದೂರನ್ನು ಕೊಟ್ಟ ನಂತರ ಪೋಲಿಸರು ನನ್ನ ಪುರವಣಿಗೆ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ. ದೂರಿನಲ್ಲಿ ಬರೆದಿರುವ ವಿಷಯವನ್ನು ಪೋಲಿಸರು ನನಗೆ ಓದಿ ಹೇಳಿರುವುದಿಲ್ಲ. ನಮ್ಮ ಊರಿನಿಂದ ಘಟನೆ ಸ್ಥಳವು ಪಶ್ಚಿಮ ದಿಕ್ಕಿಗೆ ಇದ್ದು ಅದು 1 ಕಿ.ಮೀ. ಅಂತರದಲ್ಲಿ ಇರುತ್ತದೆ. ಕಂಬಗಳು 1 ನೇ ಆರೋಪಿತನ ಹೊಲದಲ್ಲಿ ಇದ್ದವು. 1 ನೇ ಆರೋಪಿತನ ಜಮೀನಿನ ಸರ್ವೆ ನಂಬರ್ 10 ಇರುತ್ತದೆ. ಸರ್ವೆ ನಂಬರ್ 10 ರಲ್ಲಿ 7-8 ಜನರ ಜಮೀನುಗಳು ಇರುತ್ತವೆ. 1 ನೇ ಆರೋಪಿತನು ಎಷ್ಟು ಜಮೀನನ್ನು ಹೊಂದಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. 1 ನೇ ಆರೋಪಿತನ ಪೂರ್ವಕ್ಕೆ ಅಯ್ಯಾಳಪ್ಪ ಪೂಜಾರಿರವರ ಜಮೀನು ಇರುತ್ತದೆ. ಪಶ್ಚಿಮಕ್ಕೆ ಕೃಷ್ಣ ನದಿ ಇರುತ್ತದೆ. ಉತ್ತರಕ್ಕೆ ಹಳೆಮನೆ ಶಿವನಗೌಡರವರ ಹೊಲ ಇರುತ್ತದೆ. ದಕ್ಷಿಣಕ್ಕೆ ಬಾಗಮ್ಮಳ ಜಮೀನು ಇರುತ್ತದೆ. ವಿದ್ಯುತ್ ಕಂಬಗಳು 3-4 ಇರುತ್ತವೆ. ದಿ:30-08-2014 ರಂದು ರಾತ್ರಿ ಸಮಯದಲ್ಲಿ ಬಹಳ ಮಳೆ ಆಗಿತ್ತು. ಮಳೆ ಗಾಳಿ ಬಂದಿದ್ದರಿಂದ ಕಂಬಗಳು ಬಿದ್ದಿದ್ದವು ಎಂದರೆ ಸರಿ, ವಿದ್ಯುತ್ ಕಂಬದ ತಂತಿ ಬೇರೆ ಇರುತ್ತದೆ ಹಾಗೂ ಸೋಲಾರ್ ತಂತಿ ಬೇರೆ ಇರುತ್ತದೆ ಎಂದರೆ ಸರಿ. ಸೋಲಾರ್ ತಂತಿಯಲ್ಲಿ ಕರೆಂಟ್ ಇರುವುದಿಲ್ಲ ಎಂದರೆ ಸರಿ. ವಿದ್ಯುತ್ ತಂತಿಯಲ್ಲಿ ಕರೆಂಟ್ ಇರುತ್ತದೆ ಎಂದರೆ ಸರಿ, ಸೋಲಾರ್ ತಂತಿಯಿಂದ ಮನುಷ್ಯರಿಗಾಗಲೀ ಅಥವಾ ಪ್ರಾಣಿಗಳಿಗಾಗಲೀ ತಾಗಿದರೆ ಯಾವುದೇ ರೀತಿಯ ಪ್ರಾಣ ಹಾನಿ ಆಗುವುದಿಲ್ಲ ಎಂದರೆ ಸರಿ. ವಿದ್ಯುತ್ ತಂತಿ ಯಾರ ಹೊಲದಿಂದ ಬಿದ್ದಿತ್ತು ಎಂದರೆ ಸಾಕ್ಷಿಯು 2 ನೇ ಆರೋಪಿತನ ಹೊಲದಿಂದ ಬಿದ್ದಿತ್ತು. 2 ನೇ ಆರೋಪಿತನ ಹೊಲವನ್ನು ನೇ ಆರೋಪಿತನು ದನಗಳ ಮೇವುನ ಸಲುವಾಗಿ ತೆಗೆದುಕೊಂಡಿದ್ದನು ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**11.** ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-3 ನಿಂಗಪ್ಪ ರವರನ್ನು ಪ್ರಾಸಾ-2 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, 2 ಜನ ಆರೋಪಿತರಲ್ಲಿ ತನಗೆ ಒಬ್ಬ ಆರೋಪಿ ಮಾತ್ರ ಪರಿಚಯ ಇದ್ದು, ಆತನ ಹೆಸರು ಬೂದೆಪ್ಪ ಇದ್ದು. ಚಾಸಾ-2, 4 ರಿಂದ 8 ರವರ ಪರಿಚಯ ತನಗೆ ಇದ್ದು. ಕಳೆದ 9 ವರ್ಷಗಳ ಹಿಂದೆ, ಭಾನುವಾರದಂದು ತಾನು, ಚಾಸಾ-2 ಮತ್ತು ಮೃತ ಶರಣಬಸವ ಕೂಡಿ ಬೆಳಿಗ್ಗೆ 7-00 ಗಂಟೆಗೆ ಮೇವು ತರಲು ಹೋಗಿದ್ದೆವು. ಮೇವನ್ನು ತೆಗೆದುಕೊಂಡು ಬರುವ ಸಮಯದಲ್ಲಿ ಲೈಟ್ ಕಂಬವು ಸೋಲಾರ್ ತಂತಿಯ ಮೇಲೆ ಬಿದ್ದು ಬಹಳ ದಿನಗಳು ಆಗಿತ್ತು ಇದರ ಬಗ್ಗೆ ತಮಗೆ ಗೊತ್ತಿರಲಿಲ್ಲ. ಈ ವಿಷಯ ಬೂದೆಪ್ಪನಿಗೆ ಗೊತ್ತಿದ್ದರು ಸಹ ದನಗಳು ಸಾಯಲಿ ಅಂತಾ ಹಾಗೆ ಬಿಟ್ಟಿದ್ದರಿಂದ ತಾವು ಬರುವಾಗ ಶರಣಬಸವನಿಗೆ ವಿದ್ಯುತ್ ತಗಲಿ ಸ್ಥಳದಲ್ಲಿಯೇ ಮೃತಪಟ್ಟಿದ್ದು. ಮೃತ ಶರಣಬಸವನ ರಕ್ತವು ಕಪ್ಪು ಬಣ್ಣಕ್ಕೆ ತಿರುಗಿತ್ತು. ಈ ತರಹ ಘಟನೆಯಾಗಿದ್ದು ಎಂದು ತಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**12.** ಪ್ರಾಸಾ.2 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ನಾವು ಒಟ್ಟು 3 ಜನರು ಹೋಗಿದ್ದೆವು. ನಾವು 2 ನೇ ಆರೋಪಿತನ ಹೊಲದಲ್ಲಿ ಮೇವು ಮಾಡಿದ್ದೆವು. 2 ನೇ ಆರೋಪಿತನ ಹೊಲದಲ್ಲಿ ಮೇವು ಮಾಡಿದ್ದೆವು. ನಾವು ಬೆಳಿಗ್ಗೆ 7-00 ಗಂಟೆ ಸಮಯಕ್ಕೆ ಮೇವು ತರಲು ಹೊಲಕ್ಕೆ ಹೋಗಿದ್ದೆವು. ನಾವು ಮೇವನ್ನು ತರಲು ಹೋಗಬೇಕಾದರೆ ಸೋಲಾರ್ ತಂತಿಯನ್ನು ದಾಟಿ ಹೋಗಿದ್ದೆವು ಎಂದರೆ ಸರಿ. ನಾವು ಹೋಗುವ ಕಾಲಕ್ಕೆ ಸೋಲಾರ್ ತಂತಿ ನಮಗೆ ತಾಗಿರಲಿಲ್ಲ. 1 ನೇ ಆರೋಪಿತನ ಜಮೀನಿನಲ್ಲಿ 3-4 ಕಂಬಗಳು ಇರಬಹುದು. ಸದರಿ ಕಂಬಗಳು ದಕ್ಷಿಣ ದಿಕ್ಕಿನಿಂದ ಉತ್ತರ ದಿಕ್ಕಿನ ಕಡೆಗೆ ಇರುತ್ತವೆ. 1 ನೇ ಆರೋಪಿತನ ಜಮೀನಿನ ಉತ್ತರಕ್ಕೆ ಶಿವನಗೌಡನ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಶಿವನಗೌಡನ ಜಮೀನಿನಲ್ಲಿ ಕಂಬಗಳು ಇದ್ದವು. ಅಲ್ಲಿ ಇರುತಕ್ಕಂತಹ ಎಷ್ಟು ಕಂಬಗಳು ಬಿದ್ದಿದ್ದವು ಎಂದರೆ ಸಾಕ್ಷಿಯು 2 ಕಂಬಗಳು ಬಿದ್ದಿದ್ದವು ಎಂದು ಹೇಳುತ್ತಾರೆ. 1 ನೇ ಆರೋಪಿತನ ಹೊಲದಿಂದ 2 ಕಂಬಗಳು ಬಿದ್ದಿದ್ದವು. ಕಂಬ ಬಿದ್ದು ತಂತಿ ಸೋಲಾರ್ ತಂತಿಗೆ ಜಾಯಿಂಟ್ ಆಗಿತ್ತು. ಮಳೆ ಗಾಳಿ ಆಗಿದ್ದರಿಂದ ವಿದ್ಯುತ್ ಕಂಬಗಳು ಬಿದ್ದಿದ್ದವು. ಆವತ್ತು ಮಳೆ ಗಾಳಿ ಹೆಚ್ಚಾಗಿ ನೀರು ಕೊಚ್ಚಿಕೊಂಡು ಹೋಗಿರುವ ಕಾರಣ ಕಂಬಗಳು ಬಿದ್ದಿದ್ದವು.

ಆವತ್ತು ಮಳೆಯಾಗಿ ಜಮೀನಿನಲ್ಲಿ ನೀರು ಇದ್ದಿದ್ದರಿಂದ ಸದರಿ ಜಮೀನಿನಲ್ಲಿ ಕೆಸರಾಗಿರುವ ಕಾರಣ ನಿಮಗೆ ಜಮೀನಿನಲ್ಲಿ ಹೋಗಬೇಕು ಅನಿಸಿತೋ ಅಥವಾ ಇಲ್ಲವೂ ಎಂದರೆ ಸಾಕ್ಷಿಯು ನಮಗೆ ಅನಿಸಿತ್ತು ಎಂದು ಹೇಳುತ್ತಾರೆ. ಆರೋಪಿತರ ಜಮೀನಿನ ಸುತ್ತಮುತ್ತಲು ಸೋಲಾರ್ ತಂತಿ ಹಾಕಿರುವ ಕಾರಣ ಸದರಿ ಜಮೀನಿನಲ್ಲಿ ಹೋಗಲು ದಾರಿ ಇರಲಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ತಂತಿ ನಮಗೆ ತಾಗಲಾರದೆ ಬಾಗಿ ನಾವು ಜಮೀನಿನ ಒಳಗಡೆ ಹೋಗಿದ್ದೆವು ಎಂದು ಹೇಳುತ್ತಾರೆ. ಜಮೀನಿನ ಮಾಲೀಕರ ಅಪ್ಪಣೆ ಇಲ್ಲದೆ ನಾವು ಕಳುವಿನಿಂದ ಅಲ್ಲಿಗೆ ಹೋಗಿದ್ದೆವು ಎಂದರೆ ಸರಿ. ಸದರಿ ಕಂಬಗಳು ಶಿವನಗೌಡನ ಜಮೀನಿನಲ್ಲಿ ಇರುತಕ್ಕಂತಹ ಕಂಬಗಳು ಇದ್ದವು ಎಂದರೆ ಸರಿಯಲ್ಲ. ನಾವು ಕಳುವಿನಿಂದ ಮೇವು ತರಲು ಹೋದ ವಿಷಯ ಆರೋಪಿತರಿಗೆ ಗೊತ್ತಿರಲಿಲ್ಲ ಎಂದರೆ ಸರಿ. ಆರೋಪಿತರು ನಮಗೆ ಹೊಲದಲ್ಲಿ ಬಾ ಎಂದು ಕರೆದಿರಲಿಲ್ಲ. ಆ ದಿನ 2 ನೇ ಆರೋಪಿತನು ಊರಲ್ಲಿ ಇದ್ದನು ನೇ ಆರೋಪಿತನು ಊರಲ್ಲಿ ಇರಲಿಲ್ಲ. 2 ನೇ ಆರೋಪಿತನಿಗೆ ತಿಳಿಸಿ ನಾವು ಜಮೀನಿಗೆ ಹೋಗಿರಲಿಲ್ಲ. 2 ನೇ ಆರೋಪಿತನು ಆ ಸಮಯದಲ್ಲಿ ಬಂದಿರಲಿಲ್ಲ. ಸೋಲಾರ್ ತಂತಿನೆ ಬೇರೆ ಹಾಗೂ ವಿದ್ಯುತ್ ತಂತಿನೆ ಬೇರೆ ಇರುತ್ತವೆ ಎಂದರೆ ಸರಿ, ಸೋಲಾರ್ ತಂತಿಗೆ ಜಿ-ವೈರ್ ಹಾಕಿರುತ್ತಾರೆ ಎಂದರೆ ಸರಿ. ಸೋಲಾರ್ ತಂತಿ ಮನುಷ್ಯರಿಗೆ ಅಥವಾ ಪ್ರಾಣಿಗಳಿಗೆ ತಾಗಿದರೆ ಯಾವುದೇ ಜೀವ ಹಾನಿ ಆಗುವುದಿಲ್ಲ ಎಂದರೆ ಸರಿ. ಕಂಬ ಬಿದ್ದ ಬಗ್ಗೆ ಯಾರಿಗೂ ಸಹ ಗೊತ್ತಿರಲಿಲ್ಲ ಎಂದರೆ ಸರಿ ಏಕೆಂದರೆ ಆ ದಿನ ರಾತ್ರಿ ಮಳೆ ಹೆಚ್ಚಾಗಿ ಕಂಬ ಬಿದ್ದಿತು. ಆ ರೀತಿ ಕಂಬ ಬಿದ್ದಿದ್ದನ್ನು ಯಾರು ನೋಡಿರುವದಿಲ್ಲ ಎಂದರೆ ಸರಿ. ಆವತ್ತೆ ಮಳೆಯಾಗಿ ಕಂಬ ಬಿದ್ದಿದ್ದವು ಎಂದರೆ ಸಾಕ್ಷಿಯು ಕಂಬ ಬಿದ್ದು 2 ದಿನಗಳು ಆಗಿದ್ದವು ಎಂದು ಹೇಳುತ್ತಾರೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**13.** ಈ ಪ್ರಕರಣದ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-2 ಮಲ್ಲಪ್ಪ ರವರನ್ನು ಪ್ರಾಸಾ-3 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ತನಗೆ ಇರುತ್ತದೆ. ಚಾಸಾ-1, 3 ರಿಂದ 9 ರವರ ಪರಿಚಯ ತನಗೆ ಇದ್ದು. ದಿನಾಂಕ 31-08-2014 ರಂದು ಭಾನುವಾರದಂದು ತಾನು, ನಿಂಗಪ್ಪ ಮತ್ತು ಶರಣಬಸವ ಕೂಡಿ ಮೇವು ತರಲು ಹೊಗಿದ್ದೇವು. ತಾವು ತಂತಿಯ ಕೆಳಗಡೆ ದಾಟಿ ಹೊರಟಿದ್ದೇವು ಕಂಬ ಬಿದ್ದು, 2-3 ದಿನಗಳು ಆಗಿತ್ತು. ಅದನ್ನು ಹೊಲದ ಮಾಲೀಕರು ತೆಗೆಸಿರುವುದಿಲ್ಲ ತಾವು ಇಬ್ಬರು ಒಳಗಡೆ ಹೊದೆವು. ಶರಣಬಸವ

ತಂತಿಯ ಕೆಳಗಡೆ ದಾಟುವಾಗ ಆತನಿಗೆ ಕರೆಂಟು ಹತ್ತಿ ಅಲ್ಲೇ ಸತ್ತಿದ್ದನು. ಆರೋಪಿತರು ಯಾರು ಬಂದಿರಲಿಲ್ಲ. ಮೃತ ಶರಣಬಸವ ತನ್ನು ಉಳಿಸಲು ತಾವು ಪ್ರಯತ್ನ ಮಾಡಿದ್ದು. ಆದರೆ ಮೇನ್ ಲೈಟ್ ಇದ್ದ ಕಾರಣ ತಮಗೆ ಏನು ಏನು ಮಾಡಲಾಗಲಿಲ್ಲ. ಆರೋಪಿತರ ನಿರ್ಲಕ್ಷತನದಿಂದ ಮೃತ ಶರಬಸವನು ಮೃತಪಟ್ಟಿದ್ದು. ತಾನು ಪೊಲೀಸರಿಗೆ ಹೇಳಿಕೆಯನ್ನು ಕೊಟ್ಟಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**14.** ಪ್ರಾಸಾ.3 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಘಟನಾ ಸ್ಥಳವು ಎಲ್ಲಿದೆ ಎಂದರೆ ಸಾಕ್ಷಿಯು ಅಮರೇಶ್ವರ ಹೊಲ ಎನ್ನುತ್ತಾರೆ ಅದರ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಹೊಲದಲ್ಲಿ ಭತ್ತದ ಬೆಳೆ ಬೆಳೆದಿದ್ದರು. ಆ ದಿನ ನಾನು ಚಾಸಾ-3 ಮತ್ತು ದಂಡಪ್ಪ ಅಮರೇಶ್ವರ ಹೊಲದಿಂದ ಮೇವು ತರಲು ಹೊರಟಿದ್ದೇವು. ಆ ಹೊಲದ ಸುತ್ತ ಮುತ್ತ ಸೋಲಾರ ತಂತಿ ಹಾಕಿದ್ದರು ಎಂದರೆ ಸರಿ. ಸೋಲಾರ ತಂತಿ ಹಾಕಿದ್ದರಿಂದ ಹೊಲಕ್ಕೆ ಹೋಗಲು ದಾರಿ ಇರಲಿಲ್ಲ ಎಂದರೆ ಸರಿ. ಪಕ್ಕದ ಹೊಲ ಮಲ್ಲಪ್ಪಗೌಡನಿಗೆ ಸೇರಿರುತ್ತದೆ. ಮಲ್ಲಪ್ಪಗೌಡನ ಹೊಲದಲ್ಲಿ ಅಂದಾಜು 2-3 ಕಂಬಗಳು ಇದ್ದವು. ಗದ್ದೆಗಳಲ್ಲಿ ನೀರು ನಿಂತು ನಡೆದರೆ ಕಾಲು ಸಿಕ್ಕಿಹಾಕಿಕೊಳ್ಳುತ್ತಿತ್ತು ಎಂದರೆ ಸರಿ. ಮಳೆ ಬಂದಿದ್ದರಿಂದ ಹೊಲದಲ್ಲಿ ನೀರು ನಿಂತಿತ್ತು ಎಂದರೆ ಸರಿ. ಮಲ್ಲಪ್ಪಗೌಡನ ಹೊಲದಲ್ಲಿ ವಿದ್ಯುತ್ ಕಂಬಗಳು ಇದ್ದವು ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೀರಾ ಎಂದರೆ ನೆನಪಿಲ್ಲ ಎನ್ನುತ್ತಾರೆ. ನೀವು ಮಲ್ಲಪ್ಪಗೌಡನ ಹೊಲ್ಲದಲಿ ವಿದ್ಯುತ್ ಕಂಬಗಳು ಇದ್ದವು ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ನನಗೆ ನೆನಪಿಲ್ಲ ಎನ್ನುತ್ತಾರೆ.

ನಿಮ್ಮ ಹೇಳಿಕೆ ಪ್ರಕಾರ ಶಿವನಗೌಡ ಆನೇರ ಇವರ ಹೊಲದಲ್ಲಿ ಕರೆಂಟ್ ಕಂಬ ಬಿದ್ದಿತ್ತು ಎಂದು ಬರೆಸಿದ್ದೀರಾ ಎಂದರೆ ಸಾಕ್ಷಿಯು ಯಾರ ಹೊಲ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಳೆಗೆ ಒಂದು ಕಂಬ ಬಿದ್ದಿತ್ತು. ವಿದ್ಯುತ್ ಕಂಬದ ತಂತಿಗಳು ನೆಲದ ಮೇಲೆ ಬಿದ್ದಿದ್ದವೆ ಎಂದರೆ ಸಾಕ್ಷಿಯು ಸೋಲಾರ್ ವೈರ ಮೇಲೆ ಬಿದ್ದಿದ್ದವು ಎನ್ನುತ್ತಾರೆ. ಘಟನೆ ನಡೆಯುವ 2-3 ದಿನ ಪೂರ್ವದಲ್ಲಿ ಸಾಕಷ್ಟು ಮಳೆ ಇತ್ತು. ಸೋಲಾರ ತಂತಿಯನ್ನು ಮುಟ್ಟಿದರೆ ಪ್ರಾಣದ ಅಪಾಯ ಇಲ್ಲ ಎಂದರೆ ಸರಿ. ಸೋಲಾರ ತಂತಿಯನ್ನು ದಾಟಿ ಮೇವು ತರಲು ನಾವು ಹೋಗಿದ್ದೇವು. ನೀವು ಸೋಲಾರ ತಂತಿಯನ್ನು ದಾಟಿ ಮೇವು ತರಲು ಹೋದಾಗ ನಿಮಗೆ ಏನೂ ಅಪಾಯ ಆಗಿರಲಿಲ್ಲ ಎಂದರೆ ಸರಿ. ನೀವು ಹೋಗುವ ಕಾಲಕ್ಕೆ

ವಿದ್ಯುತ್ ಕಂಬ ಕೆಳಗೆ ಬಿದ್ದಿತ್ತು ಮತ್ತು ವೈರ ತಂತಿ ಕೆಳಗೆ ಬಿದ್ದಿತ್ತು ಎಂದರೆ ಸರಿ. ನಾವು ಆ ದಿನ ಮೇವನ್ನು ಮಾಡಿರುತ್ತೇವೆ ಆಗ ಸಮಯ ಬೆಳಿಗ್ಗೆ 8-00 ಗಂಟೆ ಆಗಿತ್ತು. ಮೇವು ಮಾಡಿಕೊಂಡು ವಾಪಸ್ಸು ಹೊಲವನ್ನು ಇಬ್ಬರು ದಾಟಿದೆವು ನಮಗೆ ತಂತಿ ತಗಲಿರಲಿಲ್ಲ. ಶರಣಬಸವನಿಗೆ ತಂತಿ ಹೇಗೆ ತಲಿದೆ ಎಂದು ನನಗೆ ಗೊತ್ತಿಲ್ಲ. ಶರಣಬಸವನಿಗೆ ಕುತ್ತಿಗೆ ಭಾಗಕ್ಕೆ ಮತ್ತು ಕೈ ಕಿರುಬೆರಳಿಗೆ ಗಾಯಗಳಾಗಿರುತ್ತವೆ. ಈ ರೀತಿ ನಿಮ್ಮ ಹೇಳಿಕೆಯಲ್ಲಿ ಶರಣಬಸವನಿಗೆ ಕುತ್ತಿಗೆ ಭಾಗಕ್ಕೆ ಮತ್ತು ಕೈ ಕಿರುಬೆರಳಿಗೆ ಆಗಿದೆ ಎಂದು ಹೇಳಿಕೆ ಕೊಟ್ಟಿದ್ದೀರಾ ಎಂದರೆ ನೆನಪಿಲ್ಲ ಎನ್ನುತ್ತಾರೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**15.** ಈ ಪ್ರಕರಣದ ಮತ್ತೊಬ್ಬ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ-4 ತಾಯಮ್ಮ ರವರನ್ನು ಪ್ರಾಸಾ-4 ಎಂದು ವಿಚಾರಣೆಗೆ ಒಳಪಡಿಸಿದ್ದು ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಆರೋಪಿತರ ಪರಿಚಯ ನನಗೆ ಇರುತ್ತದೆ. ಚಾಸಾ-1 ತನ್ನ ಗಂಡನಾಗಬೇಕು. ಚಾಸಾ-2, 3 ಮತ್ತು 5 ರಿಂದ 8 ರವರ ಪರಿಚಯ ನನಗೆ ಇರುತ್ತದೆ. ಕಳೆದ 9 ವರ್ಷಗಳ ಹಿಂದೆ ತನ್ನ ಮಗನು ಮೇವು ತರಲು ಹೋಗಿದ್ದನು. ಆತನ ಜೊತೆಗೆ ನಿಂಗಣ್ಣ ಮತ್ತು ಮಲ್ಲಪ್ಪರವರು ಸಹ ಹೋಗಿದ್ದರು. ತನ್ನ ಮಗನ ಹೆಸರು ಶರಣಬಸವ ಇರುತ್ತದೆ. ಕರೆಂಟ್ ವೈರು ಬಿದ್ದು 3 ದಿನಗಳು ಆಗಿದ್ದರು ಸಹ ಆರೋಪಿತರಿಗೆ ಗೊತ್ತಿದ್ದರು ಸಹ ಅವರು ಸುಮ್ಮನಿದ್ದರು. ಮೇವು ತೆಗೆದುಕೊಂಡು ಬರುವ ಸಮಯದಲ್ಲಿ ಇಬ್ಬರು ಹೊರಗಡೆ ಬಂದಿದ್ದರು ಆದರೆ ತನ್ನ ಮಗನಿಗೆ ಕರೆಂಟ್ ಹಿಡಿದಿತ್ತು. ತನ್ನ ಮಗನನ್ನು ಹನುಮಂತ ದೇವರ ಗುಡಿಯಲ್ಲಿ ತೆಗೆದುಕೊಂಡು ಬಂದು ಸದರಿ ಗುಡಿಯು ಜಮೀನಿನ ಪಕ್ಕ ಇರುತ್ತದೆ. ಪೋಲಿಸರು ಗುಡಿಯಲ್ಲಿ ತನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಈ ಘಟನೆಯ ಕುರಿತು ಪೋಲಿಸರಿಗೆ ತಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**16.** ಪ್ರಾಸಾ.4 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಮೃತ ವ್ಯಕ್ತಿಯು ನನ್ನ ಮಗನಾಗಬೇಕು. ಆ ದಿನ ನಿಂಗಣ್ಣ, ಮಲ್ಲಣ್ಣ ಮತ್ತು ಶರಣಬಸವ ಕೂಡಿ ಹೋಗಿದ್ದರು. ನಮ್ಮೂರಿನಿಂದ ಒಂದು ಕಿ.ಮಿ. ಅಂತರದಲ್ಲಿ ಹೊಲ ಇರುತ್ತದೆ. ಸದರಿ ಹೊಲದ ಮಾಲೀಕ ಅಮರೇಶಗೌಡ ಇರುತ್ತಾನೆ ಆತನ ಹೊಲವನ್ನು ಬೂದೆಪ್ಪಗೌಡ ಸಾಗುವಳಿ ಮಾಡಿರುತ್ತಾನೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಹೊಲದ ಸುತ್ತ ಮುತ್ತ ಯಾರ

ಜಮೀನುಗಳು ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ ಅವರ ಹೊಲಗಳು ಇರುತ್ತವೆ. ನಾನು ಗುನ್ನ ಸ್ಥಳಕ್ಕೆ ಹೋದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ತಿಳಿಯುವುದಿಲ್ಲ. ಅಪಘಾತ ಸ್ಥಳದಲ್ಲಿ ಬಹಳಷ್ಟು ಜನರು ಸೇರಿದ್ದರು. ನನ್ನ ಮಗನು ಹೋದ ನಂತರ ಎಷ್ಟು ತಾಸು ನಂತರ ನಾನು ಹೋಗಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ಮಗನ ತಲೆಗೆ ಸೋಲಾರ್ ಹತ್ತಿ ಅದರ ದಂಡಿಗೆ ಬಿದ್ದಿದ್ದನು. ನನ್ನ ಮಗನ ಕತ್ತಿಗೆ ಸೋಲಾರ್ ತಂತಿ ಹತ್ತಿತ್ತು. ಜಮೀನಿನ ಯಾವ ದಿಕ್ಕಿನಲ್ಲಿ ಬಿದ್ದಿದ್ದನು ಎಂದು ನನಗೆ ಹೇಳಲು ಬರುವುದಿಲ್ಲ. ಜಮೀನಿನಲ್ಲಿ ಕವಳೆ ಬೆಳೆ ಇತ್ತು. ನಾನು ಹೊಲಕ್ಕೆ ಹೋಗಿ ನೋಡಿರುತ್ತೇನೆಂದು ಪೋಲಿಸರಿಗೆ ನಾನು ಹೇಳಿರುವುದಿಲ್ಲ ಆದರೆ ನನ್ನ ಯಜಮಾನ ಅವರಿಗೆ ಹೇಳಿರುತ್ತಾನೆ. 1 ಮತ್ತು 2 ನೇ ಆರೋಪಿತರ ನಿರ್ಲಕ್ಷತನದಿಂದ ಈ ಪ್ರಕರಣದ ಘಟನೆಯಾಗಿರುತ್ತದೆ ಎಂದು ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ನಾನು ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ ಎಂದು ಒಪ್ಪಿಕೊಂಡಿರುತ್ತಾರೆ.

**17.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-5 ಹೊನ್ನಪ್ಪ ರವರನ್ನು ಪ್ರಾಸಾ-5 ಎಂದು ವಿಚಾರಣೆಗೆ ಒಳಪಡಿಸಿದ್ದು, ಚಾಸಾ-1 ತನಗೆ ದೂರದ ಸಂಬಂಧಿಕರು. ಚಾಸಾ-2 ಮತ್ತು 3 ತನಗೆ ದೂರದ ಸಂಬಂಧಿಕರು. ದಿನಾಂಕ: 31-08-2014 ರಂದು ಬೆಳಿಗ್ಗೆ 7-45 ಗಂಟೆಗೆ ಹೊಳೆದಂಡೆಯ ಗದ್ದೆಯಲ್ಲಿ ಮೇವು ಮಾಡಿಕೊಂಡು ಬರಲು, ಮಲ್ಲಪ್ಪ, ನಿಂಗಪ್ಪ ಮತ್ತು ಶರಣಬಸವ ಇವರು ಹೋಗಿದ್ದರು. ಎರಡು ಹೊಲ ದಾಟಿದ ಮೇಲೆ ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಅಳವಡಿಸಿದ್ದು, ಅದನ್ನು ಬೂದೆಪ್ಪಗೌಡ ಇವರಿಗೆ ಲೀಜ್‌ಗೆ ಕೊಟ್ಟಿದ್ದು. ಸೋಲಾರ ತಂತಿಗೆ ಕೆ.ಇ.ಬಿ ತಂತಿ ಬಿದ್ದಿದ ಪರಿಣಾಮವಾಗಿ ಸೋಲಾರ ತಂತಿಯಲ್ಲಿ ವಿದ್ಯುತ್ ಹರಿದಿತ್ತು. ಆ ಸೋಲಾರ ತಂತಿ ಶರಣಬಸವನಿಗೆ ತಗಲಿ ಅಲ್ಲಿಯೇ ಸ್ಥಳದಲ್ಲಿಯೇ ಮರಣ ಹೊಂದಿದ್ದು. ಶರಣಬಸವನಿಗೆ ತಲೆಯ ಹಿಂಭಾಗದಲ್ಲಿ ತಂತಿ ತಗಲಿದ್ದು. ಹೊಲದ ಲೀಜ್ ಮಾಡಿದವರ ತಪ್ಪಿನಿಂದ ಅಪಘಾತವಾಗಿದ್ದು. ಅಪಘಾತವಾಗುವ ಕಾಲಕ್ಕೆ ತಾನು ಊರಿನಲ್ಲಿದ್ದೆ ಈ ವಿಷಯವನ್ನು ಊರಿನ ಜನರು ತನಗೆ ತಿಳಿಸಿದ್ದು. ಈ ಬಗ್ಗೆ ದೂರನ್ನು ಚಾಸಾ-1 ರವರು ಕೊಟ್ಟಿದ್ದು. ಈ ಬಗ್ಗೆ ಪೋಲಿಸರು ತನ್ನನ್ನು ವಿಚಾರ ಮಾಡಿದ್ದರು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**18.** ಪ್ರಾಸಾ.5 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಫಿರ್ಯಾದಿದಾರರು ನನಗೆ 2 ನೇ ಅಣ್ಣ ತಮ್ಮಂದಿರಾಗಬೇಕು. ಚಾಸಾ-2 ಮತ್ತು 3 ನನ್ನ ಅಣ್ಣನ ಮಕ್ಕಳು. ಚಾಸಾ-6 ನಮ್ಮೂರಿನ ಮುಖಂಡರು. ಊರಿನಿಂದ ಸುಮಾರು ಅರ್ಧ ಕಿ.ಮಿ ದೂರ ಘಟನಾ ಸ್ಥಳ ಇದೆ. ಘಟನಾ ಸ್ಥಳವು ಊರಿನ ಉತ್ತರ ದಿಕ್ಕಿಗೆ ಇದೆ. ಊರಿನ ಸುಮಾರು 100 ಜನರು ಘಟನಾ ಸ್ಥಳಕ್ಕೆ ಹೋಗಿರುತ್ತಾರೆ. ಘಟನಾ ಸ್ಥಳವು ಉತ್ತರ ದಿಕ್ಕಿಗೆ ಇರುತ್ತದೆ. ಹೊಳೆ ದಂಡೆಗೆ ಹೋಗಿ ಮೇವನ್ನು ಮಾಡಿಕೊಂಡು ಬರುತ್ತಿದ್ದರು. ಮೇವನ್ನು ಯಾರ ಹೊಲದಲ್ಲಿ ಮಾಡಿದ್ದರು ಎಂದು ನಾನು ನೋಡಿಲ್ಲ. ಆ ಹೊಲದ ಸರ್ವೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಹೊಲದ ಪಹಣೀ ಪತ್ರಿಕೆಯನ್ನು ನಾನು ನೋಡಿಲ್ಲ. ಅಮರೇಶಗೌಡ, ಶಿವನಗೌಡ ಮತ್ತು ಮಲ್ಲಪ್ಪಗೌಡ ಹಾಗೂ ಭೀಮರಾಯ ಗೌಡ ಇವರ ಹೊಲಗಳಲ್ಲಿ ಕೆ ಇ ಬಿ ವಿದ್ಯುತ್ ಕಂಬಗಳು ಇವೆ. ಘಟನೆ ಸ್ಥಳದಲ್ಲಿ ಎಷ್ಟು ಕಂಬಗಳಿವೆ ಎಂದರೆ ಸಾಕ್ಷಿಯು ಟಿ.ಸಿ ಗೆ 2 ಕಂಬಗಳಿದ್ದವು ಅದರಲ್ಲಿ ಒಂದು ಕಂಬ ಬಿದ್ದಿತ್ತು ಎನ್ನುತ್ತಾರೆ. ಟಿ.ಸಿ ಯಾರ ಹೊಲದಲ್ಲಿತ್ತು ಎಂದರೆ ಸಾಕ್ಷಿಯು ಅಮರೇಶಗೌಡ ಮತ್ತು ಶಿವನಗೌಡ ಇವರ ಹೊಲದಲ್ಲಿ ಇದೆ ಇವರ ಹೊಲದಲ್ಲಿಯೇ ಇದೆಯೆಂದು ಗುರುತಿಸಲು ನನಗೆ ಆಗುವುದಿಲ್ಲ ಎನ್ನುತ್ತಾರೆ. ಯಾರ ಹೊಲದಲ್ಲಿ ಕೆ.ಇ.ಬಿ ಕಂಬ ಬಿದ್ದಿತ್ತು ಎಂದರೆ ಸಾಕ್ಷಿಯು 10 ವರ್ಷ ಹಿಂದೆ ಘಟನೆಯಾಗಿದ್ದು ನನಗೆ ಈಗ ನೆನಪಿಲ್ಲ ಎನ್ನುತ್ತಾರೆ. ಕೆ.ಇ.ಬಿ ಕಂಬ ಯಾವ ದಿಕ್ಕಿಗೆ ಬಿದ್ದಿತ್ತು ಎಂದು ನನಗೆ ಈಗ ನೆನಪಿಲ್ಲ. ಕೆ.ಇ.ಬಿ ಕಂಬ ಘಟನೆಯಾಗುವ 2 ದಿನ ಮೊದಲು ಬಿದ್ದಿತ್ತು ಎಂದು ಒಪ್ಪಿಕೊಂಡಿರುತ್ತಾರೆ.

**19.** ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-6 ರಂಗಣ್ಣ ರವರನ್ನು ಪ್ರಾಸಾ-6 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ರಿಂದ 5 ತನಗೆ ಪರಿಚಯ ಇರುತ್ತಾರೆ ತಮ್ಮೂರಿನವರು. ಆರೋಪಿತರ ಪರಿಚಯ ಇದ್ದು. ಸುಮಾರು 8-10 ವರ್ಷದ ಹಿಂದೆ ಬೆಳಿಗ್ಗೆ 7-45 ಗಂಟೆಗೆ ಆರೋಪಿ ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಹಾಕಿದ್ದರು. ಬೂದೆಪ್ಪಗೌಡನಿಗೆ ಹೊಲವನ್ನು ಲೀಜ್‌ಗೆ ಕೊಟ್ಟಿದ್ದರು. ಶಿವನಗೌಡನ ಹೊಲದಲ್ಲಿ ವಿದ್ಯುತ್ ತಂತಿ ಸೋಲಾರ ತಂತಿಯಲ್ಲಿ ಬಿದ್ದಿತ್ತು ಸೋಲಾರ ತಂತಿಯಲ್ಲಿ ವಿದ್ಯುತ್ ಇತ್ತು, ಮೇವು ತರಲು ಮೂರು ಜನ ಹುಡುಗರು ಹೋಗಿದ್ದು. ಶರಣಬಸವನಿಗೆ ಸೋಲಾರ ತಂತಿಯಿಂದ ವಿದ್ಯುತ್ ಹರಿದು

ಸ್ಥಳದಲ್ಲಿಯೇ ಮೃತಪಟ್ಟಿದ್ದು. ಶರಣಬಸವನಿಗೆ ತಲೆಯ ಹಿಂಬಾಗದಲ್ಲಿ ಗಾಯವಾಗಿತ್ತು. ಈ ಬಗ್ಗೆ ಪೋಲಿಸರು ಬಂದಿದ್ದರು, ಪಂಚನಾಮೆ ಮಾಡಿದ್ದು. ತಾನು ಪಂಚನಾಮೆಗೆ ಸಹಿ ಮಾಡಿರುತ್ತೇನೆ. ಹೊಲದ ಮಾಲೀಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಈ ಬಗ್ಗೆ ಪೋಲಿಸರಿಗೆ ಹೇಳಿಕೆ ಕೊಟ್ಟಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**20.** ಪ್ರಾಸಾ.6 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಪಂಚನಾಮೆಗೆ ನಾನು ಚಾಸಾ-5, 7 ಮತ್ತು 8 ರವರು ಸಹಿ ಮಾಡಿದೆವು. ಪಂಚನಾಮೆಗೆ 2 ಕಡೆ ಸಹಿ ಮಾಡಿದೆನು. ಪಂಚನಾಮೆಯ ವಿಷಯವನ್ನು ಓದಿ ಹೇಳಿದ್ದಾರೆಯೇ ಎಂದರೆ ಸಾಕ್ಷಿಯು ಓದಿ ಹೇಳಿದ್ದಾರೆ ಎನ್ನುತ್ತಾರೆ. 4-5 ಜನ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು. ಪಂಚನಾಮೆ ಮ ಮಾಡಿದಾಗ ಬೆಳಿಗ್ಗೆ 9-00 ಗಂಟೆಗೆ ಬಂದಿದ್ದರು. ನಾನು ಸ್ಥಳದಲ್ಲಿ ಬೆಳಿಗ್ಗೆ 8-00 ಗಂಟಯಿಂದ ಇದ್ದೇನು, ಆ ಸಮಯಲದಲ್ಲಿ ಊರಿನ ಬಹಳಷ್ಟು ಜನರು ಇದ್ದರು. ಪಂಚನಾಮೆ ಬಿಟ್ಟು ಪೋಲಿಸರು ನನ್ನ ಹೇಳಿಕೆ ಪಡೆದಿಲ್ಲ. ಸರ್ವೆ ನಂಬರ್ ಮತ್ತು ಎಕರೆ ಗುಂಟೆ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸುಮಾರು 3-4 ಕಂಬಗಳು ಶಿವನಗೌಡನ ಹೊಲದಲ್ಲಿದ್ದವು. ಅದರಲ್ಲಿ ಒಂದು ವಿದ್ಯುತ್ ಕಂಬ ಬಿದ್ದಿತ್ತು. ಶಿವನಗೌಡನ ಹೊಲ ಬಿಟ್ಟರೆ ಪೂಜಾರಿಯವರ ಹೊಲ ಮತ್ತು ಹರಿಜನರ ಹೊಲ ಇವೆ. ದೂರು ಕೊಡಲು ನಾನು ಫಿರ್ಯಾದಿದಾರರ ಜೊತೆ ಬಂದಿಲ್ಲ. ಫಿರ್ಯಾದಿದಾರರು ಯಾರ ಯಾರ ಮೇಲೆ ಫಿರ್ಯಾದಿಯನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಕೆ.ಇ.ಬಿ ಯವರ ಮೇಲೆ ಕೊಟ್ಟಿದ್ದಾರೆ. ಕೆ.ಇ.ಬಿ ಯವರ ಮೇಲೆ ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ಪರಿಹಾರ ಸಂಬಂಧ ಅರ್ಜಿ ಹಾಕಿರುವ ಬಗ್ಗೆ ನನಗೆ ಗೊತ್ತಿಲ್ಲ. ಕೆ.ಇ.ಬಿ ರವರು ಹುಡುಗನ ಕುಟುಂಬಕ್ಕೆ ಪರಿಹಾರ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಘಟನೆಯು ಕೆ.ಇ.ಬಿ ಕಂಬ ಬಿದ್ದು ತಂತಿ ಬಿದ್ದಿದೆ ಎಂದು ಆಗಿದೆ ಎಂದರೆ ಸಾಕ್ಷಿಯು ಕೆ.ಇ.ಬಿ ತಂತಿ ಸೋಲಾರ ತಂತಿ ಮೇಲೆ ಬಿದ್ದಿದ್ದರಿಂದ ಆಗಿದೆ ಎನ್ನುತ್ತಾರೆ. ಶಿವನಗೌಡನ ಹೊಲದಲ್ಲಿ ಕೆ.ಇ.ಬಿ ಕಂಬ ಬಿದ್ದು 3 ದಿನ ಆಗಿತ್ತು. ನಿಮ್ಮ ಹೇಳಿಕೆಯಲ್ಲಿ 3 ದಿನಗಳ ಹಿಂದೆ ಕರೆಂಟ್ ಕಂಬ ಬಿದ್ದು ಕೆ.ಇ.ಬಿ ಅಧಿಕಾರಿಗಳು ಗಮನ ಹರಿಸದೆ ಅಲಕ್ಷ್ಯತನ ಮತ್ತು ಅಜಾಗರೂಕತೆ ಎಂದು ಪೋಲಿಸರಿಗೆ ಹೇಳಿಕೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿಯು ಕೆ.ಇ.ಬಿ ಕಂಬ ಬಿದ್ದು ಅದರ ವಿದ್ಯುತ್ ವೈರ ಸೋಲಾರ ತಂತಿಯ

ಮೇಲೆ ಬಿದ್ದಿದೆ ಎಂದು ಹೇಳಿಕೆ ಕೊಟ್ಟಿದ್ದೇನೆ ಎನ್ನುತ್ತಾರೆ. ಘಟನೆಯಾಗುವ 2 ದಿನದ ಹಿಂದೆ ಸಾಕಷ್ಟು ಮಳೆಯಾಗಿತ್ತು ಎಂದರೆ ಸರಿ. ಹೊಲದಲ್ಲಿ ನೀರು ನಿಂತು ಕೆಸರು ಇತ್ತು ಎಂದರೆ ಸರಿ. ಕೆಸರಿರುವ ಕಾರಣ ಹೊಲದಲ್ಲಿ ಕೆಲಸ ಮಾಡಲು ಬರುತ್ತಿರಲಿಲ್ಲ ಎಂದರೆ ಸರಿ. ಸೋಲಾರ ತಂತಿಗೆ ಸ್ಪರ್ಶ ಮಾಡಿದರೆ ಪ್ರಾಣಿಗಳು ಮತ್ತು ಮನುಷ್ಯರಿಗೆ ಜೀವ ಹಾನಿಯಾಗುವುದಿಲ್ಲ ಎಂದರೆ ಸಾಕ್ಷಿಯು ಸೋಲಾರ ತಂತಿ ಮುಟ್ಟಿದರೆ ಪ್ರಾಣ ಹಾನಿ ಇರುವುದಿಲ್ಲ ಆದರೆ ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಇತ್ತು ಎಂದು ಒಪ್ಪಿಕೊಂಡಿರುತ್ತಾರೆ.

**21.** ಈ ಪ್ರಕರಣದ ಪಂಚಸಾಕ್ಷಿದಾರರಾದ ಚಾಸಾ-7 ಚನ್ನಪ್ಪ ರವರನ್ನು ಪ್ರಾಸಾ-7 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಸಾಕ್ಷಿಯು ಶವ ತನಿಖಾ ವರದಿಗೆ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು. ಸ್ಥಳ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು. ಸದರಿ ಸಹಿಯನ್ನು ಸುಮಾರು 10 ವರ್ಷದ ಹಿಂದೆ ಕೊಣಚಪ್ಪಳಿ ಗ್ರಾಮದ ಹನುಮನದೇವರ ದೇವಸ್ಥಾನಲ್ಲಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಅಮರೇಶಗೌಡನ ಹೊಲದಲ್ಲಿ ಸೋಲಾರ ತಂತಿಯನ್ನು ಹಾಕಿದ್ದು ವಿದ್ಯುತ್ ಕಂಬ ಬಿದ್ದು ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಹರಿದಿತ್ತು. 3 ಜನ ಹುಡುಗುರು ಮೇವು ತರಲು ಹೋಗಿದ್ದರು ಇಬ್ಬರು ಹುಡುಗರು ತಂತಿಯನ್ನು ದಾಟಿ ಹೋಗಿದ್ದರು. ಒಬ್ಬ ಹುಡುಗ ಶರಣಬಸವ ತಂತಿ ತಗಲು ವಿದ್ಯುತ್ ಹರಿದು ಸ್ಥಳದಲ್ಲೇ ಮರಣ ಹೊಂದಿದ್ದು. ಪೋಲಿಸರು ಬಂದು ತನ್ನ ಸಹಿಯನ್ನು ಮಾಡಿಸಿಕೊಂಡಿದ್ದು. ಈ ಬಗ್ಗೆ ಪೋಲಿಸರು ತನ್ನನ್ನು ವಿಚಾರಣೆ ಮಾಡಿದ್ದು ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**22.** ಪ್ರಾಸಾ.7 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಹನುಮನದೇವರ ಗುಡಿಯಲ್ಲಿ ಚಾಸಾ-3, 5 ಮತ್ತು 8 ಇವರ ಸಹಿ ಪಡೆದಿರುತ್ತಾರೆ. ಪಂಚನಾಮೆಗೆ ಒಬ್ಬೊಬ್ಬರು 2 ಸಹಿಗಳನ್ನು ಮಾಡಿರುತ್ತೇವೆ. ಸಹಿ ಮಾಡಿದಾಗ ಸಮಯ ಮದ್ಯಾಹ್ನ 12-30 ಗಂಟೆಯಾಗಿತ್ತು. ನಾನು ಸಹಿ ಮಾಡಿದ ಜಾಗಕ್ಕೂ ಘಟನಾ ಸ್ಥಳಕ್ಕೂ ಅಂದಾಜು 4 ಹೊಲ ಅರ್ಧ ಕಿ ಮಿ ದೂರ ಇತ್ತು. ಪಂಚನಾಮೆಯಲ್ಲಿ ಏನೂ ಬರೆದಿದ್ದಾರೆ ನಿಮಗೆ ಗೊತ್ತಿದೆಯಾ ಗೊತ್ತಿಲ್ಲ ಎನ್ನುತ್ತಾರೆ. ಪಂಚನಾಮೆಯಲ್ಲಿ ಘಟನೆಯ ಸ್ಥಳದ ಚಕ್‌ಬಂದಿ ಬರೆದಿದ್ದಾರೆಯೇ ಎಂದರೆ ತನಗೆ ಗೊತ್ತಿಲ್ಲ

ಎನ್ನುತ್ತಾರೆ. ನಿ.ಪಿ-3 ಸ್ಥಳ ಮಹಜರನಲ್ಲಿ ಅಮರೇಶನಗೌಡನ ಹೊಲದ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ಮಹಜರನಲ್ಲಿ ಯಾವ ಸರ್ವೆ ನಂಬರ್ ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಮಹಜರನಲ್ಲಿ ಅಮರೇಶಗೌಡನ ಹೊಲದ ಬರೆದಿದ್ದಾರೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಪೋಲಿಸರು ಮಹಜರನ್ನು ಮದ್ಯಾಹ್ನ 2-30 ರಿಂದ 4-00 ಗಂಟೆಯವರೆಗೆ ಎಂದು ನಮೂದು ಮಾಡಿದ್ದಾರೆ ಎಂದರೆ ಸಾಕ್ಷಿಯು ಅವರು ಮೊದಲೆ ಸಹಿ ಮಾಡಿಸಿಕೊಂಡಿದ್ದರು ಎನ್ನುತ್ತಾರೆ. ನೀವು ಸಹಿ ಮಾಡುವಾಗ ಮಹಜರನಲ್ಲಿ ಏನೂ ಬರೆದಿರಲಿಲ್ಲ ಎಂದರೆ ಸಾಕ್ಷಿಯು ಎಲ್ಲಾ ಮೊದಲೇ ಬರೆದಿದ್ದರು ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ಹನುಮನದೇವರ ಗುಡಿಯಲ್ಲಿ ಮಹಜರ ಬರೆದಿದ್ದರು ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**23.** ಈ ಪ್ರಕರಣದ ಪಂಚಸಾಕ್ಷಿದಾರರಾದ ಚಾಸಾ-8 ಹನುಮಂತ ರವರನ್ನು ಪ್ರಾಸಾ-8 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ಚಾಸಾ-1 ರಿಂದ 5 ತನಗೆ ಪರಿಚಯ ಇರುತ್ತಾರೆ. ತಾನು ಹೆಬ್ಬೆಟ್ಟಿನ ಸಹಿಯನ್ನು ಮಾಡುತ್ತೇನೆ. ಸಾಕ್ಷಿಗೆ ಶವ ತನಿಖಾ ವರದಿ ಮತ್ತು ಸ್ಥಳ ಪಂಚನಾಮೆಯಲ್ಲಿ ಅವರ ಹೆಸರಿನ ಸಹಿ ಇದ್ದು ಅದನ್ನು ಗುರುತಿಸಲು ತಿಳಿಸಿದ್ದು ನಾನು ಹೆಬ್ಬೆಟ್ಟಿನ ಸಹಿಯನ್ನು ಮಾಡುತ್ತೇನೆ ಎನ್ನುತ್ತಾರೆ. ಸುಮಾರು 10 ವರ್ಷದ ಹಿಂದೆ ಅಮರಪ್ಪನಗೌಡನ ಹೊಲದಲ್ಲಿ ಸೋಲಾರ ತಂತಿ ಹಾಕಿದ್ದರು. ವಿದ್ಯುತ್ ಕಂಬ ಬಿದ್ದು ವಿದ್ಯುತ್ ತಂತಿ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಹರಿದಿತ್ತು. 3 ಜನ ಹುಡುಗುರು ಮೇವು ತರಲು ಹೋಗಿದ್ದರು ಇಬ್ಬರು ಹುಡುಗರು ತಂತಿಯನ್ನು ದಾಟಿ ಹೋಗಿದ್ದರು. ಒಬ್ಬ ಹುಡುಗ ಶರಣಬಸವ ತಂತಿ ತಗಲು ವಿದ್ಯುತ್ ಹರಿದು ಸ್ಥಳದಲ್ಲೇ ಮರಣ ಹೊಂದಿರುತ್ತಾನೆ ಎಂದು ಅಭಿಯೋಜನಾ ಪ್ರಕರಣಕ್ಕೆ ಸಾಕ್ಷ್ಯ ನುಡಿದಿರುತ್ತಾರೆ.

**24.** ಪ್ರಾಸಾ.8 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ನಿ.ಪಿ-2 ಮತ್ತು 3 ರ ಪಂಚನಾಮೆಯಲ್ಲಿ ನಿಮ್ಮ ಹೆಬ್ಬಟ್ಟಿನ ಸಹಿ ಇರುವುದಿಲ್ಲ ಎಂದರೆ ಸರಿ. ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ ನಾನು ಹೆಬ್ಬೆಟ್ಟಿನ ಸಹಿ ಮಾಡುತ್ತೇನೆ. ಪಂಚನಾಮೆಯಲ್ಲಿ ಬರೆದ ವಿಷಯ ಓದಿ ಹೇಳಿದ್ದಾರೆಯೇ ಎಂದರೆ ಓದಿ ಹೇಳಿದ್ದಾರೆ ಎನ್ನುತ್ತಾರೆ. ಪಂಚನಾಮೆಯನ್ನು ಹೊಲದಲ್ಲಿ ಮಾಡಿದರು. ಸ್ಥಳ ಮಹಜರನ್ನು ಮದ್ಯಾಹ್ನ 2-00 ಗಂಟೆಗೆ ಮಾಡಿದರು ಮಣ್ಣು

ಮಾಡುವ ಜಾಗದಲ್ಲಿ ಸಂಜೆ 5-00 ಗಂಟೆಗೆ ಮಹಜರಿಗೆ ಸಹಿ ಮಾಡಿದ್ದೇನೆ. ನಿಮ್ಮ ಸಮಕ್ಷಮ ಮಹಜರ ಮಾಡಿಲ್ಲ ನೀವು ಮಹಜರಿಗೆ ಹೆಬ್ಬೆಟ್ಟು ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಹನುಮಂತ ತಂದೆ ಭಾಗಪ್ಪ ಸಂಗನ ಎನ್ನುವ ಹೆಸರಿನವನು ನಾನೊಬ್ಬನೆ ನಮ್ಮೂರಿನಲ್ಲಿರುತ್ತೇನೆ. ಇದೇ ಹೆಸರಿನವರು ನಿಮ್ಮೂರಿನಲ್ಲಿ 20 ಜನರು ಇದ್ದಾರೆ ಎಂದರೆ ಸರಿಯಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**25.** ಈ ಪ್ರಕರಣದ 3 ನೇ ಆರೋಪಿತನ ಕರ್ತವ್ಯದ ದೃಡಿಕರಣ ಪತ್ರ ನೀಡಿದ ಸಾಕ್ಷಿದಾರರಾದ ಚಾಸಾ-9 ಬಸವರಾಜ ರವರನ್ನು ಪ್ರಾಸಾ-9 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, 3 ನೇ ಆರೋಪಿ ಮಹೆಬೂಬು ರವರು 2017 ರವರೆಗೆ ಜೆಸ್ಕಾಂ ಲೈನ್ ಮೆನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ದಿನಾಂಕ: 12-07-2017 ರಂದು ಮಹೆಬೂಬ ರವರು ತೀರಿಕೊಂಡಿರುತ್ತಾರೆ. 2015 ನೇ ಸಾಲಿನಲ್ಲಿ ಘಟನೆ ನಡೆದಾಗ ಮಹೆಬೂಬು ರವರು ಲೈನ್‌ಮೆನ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಆ ಬಗ್ಗೆ ಕರ್ತವ್ಯ ಪ್ರಮಾಣ ಪತ್ರವನ್ನು ನಾನು ಪಿ ಎಸ್ ಐ ರವರಿಗೆ ನೀಡಿರುತ್ತೇನೆ. ಸಾಕ್ಷಿ ಸದರಿ ಕರ್ತವ್ಯ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ನಿ.ಪಿ-4 ಎಂದು ಗುರುತಿಸಲಾಯಿತು. ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ- 4(ಎ) ಎಂದು ಗುರುತಿಸಲಾಯಿತು. ಇಷ್ಟು ಬಿಟ್ಟರೆ ಬೇರೆನು ಪ್ರಕರಣದಲ್ಲಿ ಆಗಿರುವುದಿಲ್ಲ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**26.** ಪ್ರಾಸಾ.೯ ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, 3 ನೇ ಆರೋಪಿ ನಿಮ್ಮ ಇಲಾಖೆಯಲ್ಲಿ ಆ ಸಮಯದಲ್ಲಿ ಕರ್ತವ್ಯ ನಿರ್ವಹಿಸದೆ ಇದ್ದರೂ ಪೋಲಿಸರ ಮಾತು ಕೇಳಿಎ ಸುಳ್ಳು ಕರ್ತವ್ಯ ಪ್ರಮಾಣ ಪತ್ರ ಕೊಟ್ಟಿದ್ದೀರಿ ಎಂದರೆ ಸರಿಯಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**27.** ಈ ಪ್ರಕರಣದ ವೈದ್ಯಾಧಿಕಾರಿಗಳಾದ ಚಾಸಾ-10 ಡಾ. ರಾಜಕುಮಾರ ಹುಲಿಮನಿ ರವರನ್ನು ಪ್ರಾಸಾ-10 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ 31-08-2014 ರಂದು ಸಂಜೆ 4-00 ಗಂಟೆಗೆ ಸಿ.ಹೆಚ್.ಸಿ 120 ದೇವದುರ್ಗ ಪೋಲಿಸ್ ಠಾಣೆ ಇವರ ಕೋರಿಕೆಯ ಮೇರೆಗೆ ಮೃತ ಶರಣಬಸವ ತಂದೆ ಶಿವಪ್ಪ, ವಯಾ:15 ವರ್ಷ, ಸಾ: ಕೋಣಚಪ್ಪಳಿ, ಇತನು ವಿದ್ಯುತ್ ಪ್ರವಹಿಸಿ ಅಪಘಾತದಲ್ಲಿ ಮರಣ ಹೊಂದಿದ್ದಾನೆಂದು ಆತನ ಮರಣೋತ್ತರ

ಪರೀಕ್ಷೆಯನ್ನು ಮಾಡಿರುತ್ತೇನೆ. ಮೃತನ ದೇಹದ ಮೇಲೆ ವಿದ್ಯುತ್ ಶಾಕ್ ಆಗಿ ಆತನಿಗೆ multiple burn one neck region and left hand middle 1/3r part of left four arm all are black colour in irregular shape. Opinion as to cause of death was electric shock. ಅಂತಾ ಮರಣೋತ್ತರ ಶವಾ ಪರೀಕ್ಷೆ ವರದಿಯನ್ನು ಕೊಟ್ಟಿರುತ್ತೇನೆ. ಸಾಕ್ಷಿದಾರರು ನೋಡಿ ಗುರುತಿಸಿದ್ದು ನಿ.ಪಿ-5 ಎಂದು, ಮೃತ ಬಾಲಕನ ಎರಡು ಛಾಯಾ ಚಿತ್ರಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ.ಪಿ-6 ಮತ್ತು 7 ಎಂದು ಗುರುತಿಸಲಾಯಿತು. ವಿದ್ಯುತ್ ಕಂಬದ ತಂತಿ ಸ್ಪರ್ಶಿಸಿ ವಿದ್ಯುತ್ ಪ್ರವಹಿಸಿ ಈ ರೀತಿ ಸಾವು ಆಗುವ ಸಂಭವ ಇರುತ್ತದೆ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**28.** ಪ್ರಾಸಾ.10 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ದಿನಾಂಕ: 31-08-2014 ರಂದು ಮದ್ಯಾಹ್ನ 3-00 ಗಂಟೆ ಸುಮಾರಿಗೆ ಪೋಲಿಸರಿಗೆ ಶವಪರೀಕ್ಷೆಯನ್ನು ಮಾಡಲು ಮನವಿ ಪತ್ರ ಸ್ವೀಕರಿಸಿರುತ್ತೇನೆ. ಘಟನಾ ಸ್ಥಳಕ್ಕೆ ಹೋದಾಗ ಮದ್ಯಾಹ್ನ 3-30 ಗಂಟೆ ಆಗಿತ್ತು. ಶವ ಪರೀಕ್ಷಾ ವರದಿಯನ್ನು ಘಟನಾ ಸ್ಥಳದಲ್ಲಿ ಹೊರ ಹೊಲಯದಲ್ಲಿ ಮಾಡಿರುತ್ತೇನೆ. ಶವ ಪರೀಕ್ಷಾ ವರದಿಯನ್ನು ಯಾರ ಹೊಲದಲ್ಲಿ ಮಾಡಿದ್ದೇನೆಂದು ಸರ್ವೆ ನಂಬರ್ ನನಗೆ ಹೇಳಲು ಆಗುವುದಿಲ್ಲ. ವಿದ್ಯುತ್ ಕಂಬ ಪ್ರವಹಿಸಿ ಸಾವು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸೋಲಾರ್ ತಂತಿಯನ್ನು ಮುಟ್ಟಿ ವಿದ್ಯುತ್ ಪ್ರವಹಿಸಿದರೆ ಒಬ್ಬ ವ್ಯಕ್ತಿ ಸಾಯುವ ಸಾದ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**29.** ಈ ಪ್ರಕರಣದ ತನಿಖಾಧಿಕಾರಿಗಳಾದ ಚಾಸಾ-11 ಬಸವರಾಜ ಪಿ.ಐ ರವರನ್ನು ಪ್ರಾಸಾ-11 ಎಂದು ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ನುಡಿ ಸಾಕ್ಷ್ಯದಲ್ಲಿ, ದಿನಾಂಕ: 31-08-2014 ರಂದು ಬೆಳಿಗ್ಗೆ 10-30 ಗಂಟೆಗೆ ಫಿರ್ಯಾದಿದಾರರು ಠಾಣೆಗೆ ಹಾಜರಾಗಿ ಒಂದು ಹೇಳಿಕೆ ಫಿರ್ಯಾದಿಯನ್ನು ನೀಡಿದ್ದು, ಅದರ ಸಾರಂಶಾದ ಮೇಲೆ ಠಾಣಾ ಗುನ್ಹೆ ನಂಬರ್ 149/2014 ರಂತೆ ಭಾರತೀಯ ದಂಡ ಸಂಹಿತೆ ಕಲಂ 304(ಎ) ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು

ರವಾನಿಸಿರುತ್ತೇನೆ. ಸಾಕ್ಷಿ ಎಫ್.ಐ.ಆರ್ ನೋಡಿ ಗುರುತಿಸಿದ್ದು ಅದನ್ನು ನಿ.ಪಿ-8 ಎಂದು, ಗುರುತಿಸಲಾಯಿತು. ಸಾಕ್ಷಿದಾರರು ದೂರನ್ನು ನೋಡಿ ಗುರುತಿಸಿದ್ದು, ಅದೇ ದಿನ ಗುನ್ಹೆ ಸ್ಥಳಕ್ಕೆ ಭೇಟಿ ನೀಡಿ ಮೃತ ಶರಣಬಸವ ಇತನ ಶವ ಪಂಚನಾಮೆಯ ವರದಿಯನ್ನು ಪಂಚ ಸಾಕ್ಷಿದಾರರಾದ ಚಾಸಾ-7 ಮತ್ತು 8 ಇವರ ಸಮಕ್ಷಮ ಮದ್ಯಾಹ್ನ 12-45 ರಿಂದ 02-15 ಗಂಟೆಯವರೆಗೆ ಮಾಡಿರುತ್ತೇನೆ. ಆ ಸಮಯದಲ್ಲಿ 02 ಛಾಯಾ ಚಿತ್ರಗಳನ್ನು ತೆಗೆಸಿರುತ್ತೇನೆ. ಸಾಕ್ಷಿದಾರರು ಶವ ಪಂಚನಾಮೆ ವರದಿ ನೋಡಿ ಗುರುತಿಸಿದ್ದು, ಈಗಾಗಲೇ ನಿ.ಪಿ-2 ಎಂದು, ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ.ಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿದಾರರು ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಈಗಾಗಲೇ ನಿ.ಪಿ-6 ಮತ್ತು 7 ಎಂದು ಗುರುತಿಸಲಾಗಿದೆ. ಅದೇ ದಿನ ಸ್ಥಳಕ್ಕೆ ಭೇಟಿ ನೀಡಿ ಸ್ಥಳಳ ಪಂಚನಾಮೆಯ ವರದಿಯನ್ನು ಪಂಚ ಸಾಕ್ಷಿದಾರರಾದ ಚಾಸಾ-7 ಮತ್ತು 8 ಇವರ ಸಮಕ್ಷಮ ಮದ್ಯಾಹ್ನ 02-30 ರಿಂದ 4-30 ಗಂಟೆಯವರೆಗೆ ಮಾಡಿ ಅರ್ದ ಫೀಟ್ ಅಳತೆಯ ಸೋಲಾರ ತಂತಿಯ ವೈರನ್ನು ವಶಪಡಿಸಿಕೊಂಡಿರುತ್ತೇನೆ. ಆ ಸಮಯದಲ್ಲಿ 05 ಛಾಯಾ ಚಿತ್ರಗಳನ್ನು ತೆಗೆಸಿರುತ್ತೇನೆ. ಸಾಕ್ಷಿದಾರರು ಛಾಯಾ ಚಿತ್ರಗಳನ್ನು ನೋಡಿ ಗುರುತಿಸಿದ್ದು, ನಿ.ಪಿ-10 ರಿಂದ 14 ಎಂದು ಗುರುತಿಸಲಾಯಿತು. ಸಾಕ್ಷಿದಾರರು ಸ್ಥಳ ಪಂಚನಾಮೆ ವರದಿ ನೋಡಿ ಗುರುತಿಸಿದ್ದು, ಈಗಾಗಲೇ ನಿ.ಪಿ-3 ಎಂದು ಗುರುತಿಸಲಾಯಿತು. ಅದೇ ದಿನ ಪಿ ಎಫ್ ನ್ನು ಜಮಾ ಮಾಡಲು ಮಾನ್ಯ ನ್ಯಾಯಾಲಯಕ್ಕೆ ಪಿ.ಎಫ್ ನಂಬರ್ 79/2014 ರಂತೆ ನಿವೇದನೆ ಮಾಡಿಕೊಂಡಿರುತ್ತೇನೆ. ಪಿ.ಎಫ್ ನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು. ಅದೇ ದಿನ ಫಿರ್ಯಾದಿದಾರರ ಪುರವಣಿ ಹೇಳಿಕೆ ಮತ್ತು ಸಾಕ್ಷಿದಾರರಾದ ಚಾಸಾ-2 ರಿಂದ 6 ರವವರ ಹೇಳಿಕೆಗಳನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ: 04-09-2014 ರಂದು ವೈದ್ಯಾಧಿಕಾರಿಗಳು ಇವರಿಂದ ಮೃತನ ಶವ ಪರೀಕ್ಷಾ ವರದಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಶವ ಪರೀಕ್ಷಾ ವರದಿಯನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು, ನ್ಯಾಯಾಲಯದ ಮುಂದಿರುವ 1 ನೇ ಆರೋಪಿಯನ್ನು ನೋಡಿ ಸಾಕ್ಷಿದಾರರು ಗುರುತಿಸಿರುತ್ತಾರೆ. 2 ಮತ್ತು 3 ನೇ ಆರೋಪಿತರು ಮರಣ ಹೊಂದಿರುತ್ತಾರೆ. ನಂತರ ಮುಂದಿನ ತನಿಖೆಗಾಗಿ ಕಡತಗಳನ್ನು ಚಾಸಾ-12 ರವರಿಗೆ ಕೊಟ್ಟಿರುತ್ತೇನೆ. ಚಾಸಾ-12 ರವರು ತೀರಿಕೊಂಡಿರುತ್ತಾರೆ ಅವರು ಮುಂದಿನ ತನಿಖೆಯನ್ನು ಕೈಗೊಂಡಿರುತ್ತಾರೆ ಅವರ ಸಹಿಯನ್ನು

ನೋಡಿದರೆ ಗುರುತಿಸುತ್ತೇನೆ. ಸಾಕ್ಷಿದಾರರು ದಿನಾಂಕ: 30-08-2016 ರಂದು ಜೆಸ್ಕಾಂ ರವರು ನೀಡಿದ ಅನುಮತಿ ಪತ್ರ ಮತ್ತು ದಿನಾಂಕ: 13-10-2015 ರಂದು ಕರ್ತವ್ಯ ಪ್ರಮಾಣ ಪತ್ರ ಕೊಡುವ ಬಗ್ಗೆ ನೀಡಿದ ವರದಿಯನ್ನು ನೋಡಿ ಗುರುತಿಸಿರುತ್ತಾರೆ. ನಂತರ ಚಾಸಾ-12 ರವರು ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರವನ್ನು ಸಲ್ಲಿಸಿರುತ್ತಾರೆ ಎಂದು ಅಭಿಯೋಜನಾ ಪ್ರಕರಣಕ್ಕೆ ಪೂರಕ ಸಾಕ್ಷ್ಯ ನುಡಿದಿರುತ್ತಾರೆ.

**30.** ಪ್ರಾಸಾ.11 ರವರನ್ನು ಆರೋಪಿ ಪರ ವಕೀಲರು ಪಾಟೀಸವಾಲು ಮಾಡಿದಾಗ ಇವರು, ಚಾಸಾ-1 ರವರು ನೀಡಿದ ಹೇಳಿಕೆ ಫಿರ್ಯಾದಿಯನ್ನು ಮತ್ತು ಮರುಹೇಳಿಕೆಯನ್ನು ಸೂಗಪ್ಪ ರೈಟರ್ ಇವರು ಬರೆದುಕೊಂಡಿರುತ್ತಾರೆ. ಫಿರ್ಯಾದಿಯಲ್ಲಿ ದಸ್ತೂರು ಎಂದು ಬರೆದವರ ಸಹಿ ಇರುವುದಿಲ್ಲ. ಚಾಸಾ-1 ರವರ ಹೇಳಿಕೆಯನ್ನು ಎಫ್.ಐ.ಆರ್ ದಾಖಲಿಸಿದ ನಂತರ ಪಡೆದುಕೊಂಡಿರುತ್ತೇನೆ. ಫಿರ್ಯಾದಿದಾರರ ಪುರವಣಿ ಹೇಳಿಕೆಯನ್ನು ಹೊರತುಪಡಿಸಿ ಬೇರೆ ಸಾಕ್ಷಿದಾರರ ಪುರವಣಿ ಹೇಳಿಕೆಗಳನ್ನು ಪಡೆದಿರುವುದಿಲ್ಲ. ಸಾಕ್ಷಿದಾರರಾದ ಚಾಸಾ-2 ರಿಂದ 6 ಇವರ ಹೇಳಿಕೆಯನ್ನು ಅದೇ ದಿನ ಪಡೆದುಕೊಂಡಿರುತ್ತೇನೆ. ಎಫ್.ಐ.ಆರ್ ನಲ್ಲಿ ಜೆಸ್ಕಾಂ ಅಧಿಕಾರಿಗಳ ವಿರುದ್ಧ ದಾಖಲು ಮಾಡಿರುತ್ತೇನೆ. ಮೊದಲು ನೀಡಿದ ಹೇಳೀಕೆ ಫಿರ್ಯಾದಿಯಲ್ಲಿ ಆರೋಪಿತರ ಹೆಸರು ಇರುವುದಿಲ್ಲ ಮರು ಹೇಳಿಕೆಯಲ್ಲಿ ತಿಳಿಸಿರುತ್ತಾರೆ. ಸಾಕ್ಷಿದಾರರಾದ ಚಾಸಾ-2 ರಿಂದ 6 ಇವರ ಹೇಳಿಕೆಯಲ್ಲಿ ಕೆ.ಇ.ಬಿ ಅಧಿಕಾರಿಗಳಿಗೆ ತಿಳಿಸಿದರೂ ಕೂಡ ಅವರು ನಿರ್ಲಕ್ಷ್ಯ ವಹಿಸಿದ್ದು, ಎಂದು ನಮೂದು ಮಾಡಿರುತ್ತದೆ ಎಂದರೆ ಸಾಕ್ಷಿಯು ಸರಿ ಇರುತ್ತದೆ ಎನ್ನುತ್ತಾರೆ ಅವರು ಪರವಾನಿಗೆಯನ್ನು ಪಡೆಯದೆ ಸೋಲಾರ ತಂತಿಯನ್ನು ತಮ್ಮ ಹೊಲಕ್ಕೆ ಹಾಕಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಕರೆಂಟ್ ಕಂಬ ಬಿದ್ದಿದ್ದು ಶಿವನಗೌಡ ಆನೇರ ಇವರ ಹೊಲ ಆಗಿರುತ್ತದೆ. ಶಿವನಗೌಡ ಆನೇರ ಇವರ ಹೇಳಿಕೆಯನ್ನು ನಾನು ಪಡೆದುಕೊಂಡಿರುವುದಿಲ್ಲ. ಸೋಲಾರ ತಂತಿಯಲ್ಲಿ ವಿದ್ಯುತ್ ಇರುವುದಿಲ್ಲ, ಕೆ.ಇ.ಬಿ ಕಂಬ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಸೋಲಾರ ತಂತಿಯಲ್ಲಿ ಪ್ರವಹಿಸಿ ಆಗಿರುತ್ತದೆ ಎಂದರೆ ಸರಿ. ಪಂಚನಾಮೆಯಲ್ಲಿ ಶಿವನಗೌಡ ಆನೇರ ಮತ್ತು 1 ನೇ ಆರೋಪಿ ಇವರ ಹೊಲದ ಸರ್ವೆ ನಂಬರ್ ನಮೂದು ಮಾಡಿರುವುದಿಲ್ಲ. ತನಿಖೆಯಲ್ಲಿ ನಾನು ಕೆ.ಇ.ಬಿ ಅಧಿಕಾರಿಗಳ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಸ್ಥಳಕ್ಕೆ ಹೋದಾಗ ಪಂಚನಾಮೆಯಲ್ಲಿ ಹೊಲದಲ್ಲಿ ಏನೂ ಬೆಳೆ

ಬೆಳೆದಿದ್ದರು ಎಂದು ನಮೂದು ಮಾಡಿರುವುದಿಲ್ಲ. ಕೋಣಚಪ್ಪಗಳಿ ಗ್ರಾಮದಿಂದ ಹೊಲ ಎಷ್ಟು ದೂರ ಇರುತ್ತದೆ ಮತ್ತು ಕೃಷ್ಣಾ ನದಿ ಹೊಲದಿಂದ ಎಷ್ಟು ದೂರ ಇರುತ್ತದೆ ಎಂದು ನನಗೆ ಗೊತ್ತಿಲ್ಲ. 1 ನೇ ಆರೋಪಿ ಹರವಿ ಗ್ರಾಮದಲ್ಲಿರುತ್ತಾನೆ. 2 ನೇ ಆರೋಪಿ ಎಷ್ಟು ವರ್ಷದಿಂದ ಹೊಲ ಲೀಜ್ ಗೆ ಮಾಡುತ್ತಿದ್ದನೆಂದು ನನಗೆ ಈಗ ನೆನಪಿರುವುದಿಲ್ಲ. ಘಟನೆ ಆಗುವುದಕ್ಕಿಂತ 2-3 ದಿನಗಳ ಹಿಂದೆ ವಿಪರೀತ ಮಳೆಯಾಗಿ ಹೊಲಗಳು ನೀರಿನಿಂದ ತುಂಬಿತ್ತು ಎಂದರೆ ಸರಿ. ಯಾರು ಹೊಲಗಳಿಗೆ ಹೋಗಲಾರದಂತಹ ಪರಿಸ್ಥಿತಿ ಇತ್ತು ಎಂದರೆ ಸರಿಯಲ್ಲ. ವಿಪರೀತ ಮಳೆ ಬಂದಿದ್ದು, ಶಿವನಗೌಡ ಇವರ ಹೊಲದ ಕಂಬ ಬಿದ್ದಿದ್ದರಿಂದ ವಿದ್ಯುತ್ ಪ್ರವಹಿಸಿ ಅಪಘಾತವಾಗಿರುತ್ತದೆ ಎಂದರೆ ಸಾಕ್ಷಿಯು ಕರೆಂಟಿನ ಕಂಬ ಸೋಲಾರ ತಂತಿಯ ಮೇಲೆ ಬಿದ್ದು ವಿದ್ಯುತ್ ಪ್ರವಹಿಸಿ ಅಪಘಾತವಾಗಿದೆ ಎಂದು ಹೇಳುತ್ತಾರೆ ಎಂದು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ.

**31.** ಮೇಲ್ಕಂಡ ಸಾಕ್ಷಿದಾರರ ಸಾಕ್ಷ್ಯ ಹಾಗೂ ದಾಖಲೆಗಳನ್ನು ಸಂಪೂರ್ಣವಾಗಿ ಗಮನಿಸಿದಾಗ, ಮುಖ್ಯವಾಗಿ ಆರೋಪಿ ಪರ ವಕೀಲರು ದೂರುದಾರನು ದೂರು ಕೊಡುವ ಕಾಲಕ್ಕೆ ದೂರಿನಲ್ಲಿ ಕೆ.ಇ.ಬಿ ಅಧಿಕಾರಿಗಳ ನಿರ್ಲಕ್ಷತನದಿಂದ ಘಟನೆ ಆಗಿರುತ್ತದೆ ಎಂದು ಅವರ ಹೆಸರನ್ನು ನಮೂದು ಮಾಡಿಕೊಟ್ಟಿರುತ್ತಾನೆ. 1 ನೇ ಆರೋಪಿತನ ಹೆಸರನ್ನು ದೂರಿನಲ್ಲಿ ನಮೂದು ಮಾಡಿರುವುದಿಲ್ಲ. ಮುಂದುವರೆದು ಕೆ.ಇ.ಬಿ ಲೈನಿನ ಕಂಬಗಳು ಹೊಲದಲ್ಲಿ ಬಿದ್ದರಿಂದ ಕೆ.ಇ.ಬಿ ಅಧಿಕಾರಿಗಳ ನಿರ್ಲಕ್ಷತನದಿಂದ ಸದರಿ ಘಟನೆಯು ಆಗಿರುತ್ತದೆ, 1 ನೇ ಆರೋಪಿಯ ತಪ್ಪಿನಿಂದ ಸದರಿ ಘಟನೆಯು ಆಗಿರುವುದಿಲ್ಲ. ತನಿಖಾಧಿಕಾರಿಗಳು ದೂರದಾರನ ಪುರವಾಣಿಗೆ ಹೇಳಿಕೆಯನ್ನು ಪಡೆದುಕೊಂಡ ನಂತರ 1 ನೇ ಆರೋಪಿತನ ಹೆಸರನ್ನು ಈ ಪ್ರಕರಣದಲ್ಲಿ ಸೇರಿಸಿಕೊಂಡಿರುತ್ತಾರೆ. ಆ ಕಾರಣ ದೂರದಾರನು ದೂರಿನಲ್ಲಿ ಸ್ಪಷ್ಟವಾಗಿ 1 ನೇ ಆರೋಪಿತನ ಹೆಸರನ್ನು ನಮೂದು ಮಾಡದೇ ಇರುವುದರಿಂದ 1 ನೇ ಆರೋಪಿತನ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತಾರೆ, ಹಾಗೂ 1 ನೇ ಆರೋಪಿತನ ತಪ್ಪು ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ. ಸದರಿ ಅಂಶವನ್ನು ಕೂಲಂಕುಶವಾಗಿ ಪರಿಶೀಲನೆ ಮಾಡುವ ಅವಶ್ಯಕತೆ ಇರುತ್ತದೆ.

**32.** ದೂರುದಾರರಾದ ಪ್ರಾಸಾ-1 ರವರು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2 ರಿಂದ 4 ಮತ್ತು ಸಾಕ್ಷಿದಾರರಾದ ಪ್ರಾಸಾ-5 ಮತ್ತು 6 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 31-08-2014 ರಂದು ಬೆಳಿಗ್ಗೆ 07-45 ಗಂಟೆಗೆ ದನಕರಗಳಿಗೆ ಮೇವು ತರಲು ಚಾಸಾ-2 ಮತ್ತು 3 ಮೃತ ಶರಣಬಸವ ಇವರು ಹೋಗಿದ್ದು 1 ನೇ ಆರೋಪಿ ತನ್ನ ಹೊಲದಲ್ಲಿ ಸೋಲಾರ್ ತಂತಿಗಳನ್ನು ಸಂಬಂಧಪಟ್ಟ ಇಲಾಖೆಯಿಂದ ಯಾವುದೇ ಪರವಾನಿಗೆಯನ್ನು ಪಡೆಯದೆ ಹಾಕಿಕೊಂಡಿದ್ದರು ಹಾಗೂ ಸದರಿ ಜಮೀನಿನಲ್ಲಿ 3 ದಿನಗಳ ಹಿಂದೆ ವಿದ್ಯುತ್ ಕಂಬಗಳು ಸೋಲಾರ್ ತಂತಿಗಳ ಮೇಲೆ ಬಿದ್ದಿರುವ ವಿಷಯ ಆರೊಪಿತರಿಗೆ ಗೊತ್ತಿದ್ದರು ಸಹ ಈ ವಿಷಯವನ್ನು ಕೆ.ಇ.ಬಿ. ಅಧಿಕಾರಿಗಳಿಗೆ ತಿಳಿಸದೆ ಇರುವ ಕಾರಣ ಚಾಸಾ-1 ರವರ ಮಗನಾದ ಶರಣಬಸವ ತಂದೆ ಶಿವಪ್ಪ ಈತನು ಸೋಲಾರ್ ತಂತಿಯನ್ನು ದಾಟುವಾಗ ಆತನಿಗೆ ತಂತಿ ತಗಲಿ ವಿದ್ಯುತ್ ಶಾಕ್ ನಿಂದ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾನೆ. ಈ ಅಪಘಾತವು ಆರೋಪಿತರು ತಪ್ಪಿನಿಂದ ಆಗಿದ್ದು ಎಂದು ತಿಳಿಸಿರುತ್ತಾರೆ.

**33.** ಘಟನೆ ನಡೆದ ಹೊಲ 1 ನೇ ಆರೋಪಿತನಿಗೆ ಸೇರಿರುತ್ತದೆ ಹಾಗೂ ಸದರಿ ಹೊಲದ ಸರ್ವೆ ನಂಬರ್ 10 ಆಗಿದ್ದು, ಪ್ರಾಸಾ-1 ರವರ ಮಗ ಮೃತ ಶರಣಬಸವ ಮತ್ತು ಆತನೊಂದಿಗೆ ಇನ್ನೂ 2 ಹುಡುಗರಾದ ಪ್ರಾಸಾ- 2 ಮತ್ತು 3 ರವರು ದನಗಳಿಗೆ ಮೇವು ತರಬೇಕು ಎಂದು ಹೊಲವನ್ನು ದಾಟಿ 1 ನೇ ಆರೋಪಿತನ ಮಾಲೀಕತ್ವದ ಹೊಲದಲ್ಲಿ ಅಳವಡಿಸಿದ ಸೋಲಾರ್ ತಂತಿಯನ್ನು ದಾಟುತ್ತಿದ್ದಾಗ ಮೃತ ಶರಣಬಸವ ಈತನಿಗೆ 1 ನೇ ಆರೋಪಿತನ ಹೊಲದಲ್ಲಿ ಅಳವಡಿಸಿದ ಸೋಲಾರ್ ತಂತಿಯು ತಗುಲಿ ವಿದ್ಯುತ್ ಪ್ರವಹಿಸಿ ಆತನು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾನೆ. ಎಂದು ಸ್ಪಷ್ಟವಾಗಿ ಪ್ರಾಸಾ-1 ರಿಂದ 8 ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುತ್ತಾರೆ ಹಾಗಾಗಿ ಘಟನೆ ನಡೆದ ಹೊಲವು 1 ನೇ ಆರೋಪಿತನ ಮಾಲೀಕತ್ವಕ್ಕೆ ಸೇರಿರುತ್ತದೆ ಮತ್ತು ಅದರ ಸರ್ವೆ ನಂಬರ್ 10 ಆಗಿರುತ್ತದೆ ಎಂದು ಕಂಡು ಬಂದಿರುತ್ತದೆ. 1 ಆರೋಪಿತನು ದಂಡ ಪ್ರಕ್ರಿಯಾ ಸಮೇತ ಕಲಂ 313 ಅಡಿಯಲ್ಲಿ ತನ್ನ ಪರವಾಗಿ ಯಾವುದೇ ನಿಲುವನ್ನು ತೆಗೆದುಕೊಂಡಿರುವುದಿಲ್ಲ ಹಾಗೂ ಈ ಬಗ್ಗೆ ಸ್ಪಷ್ಟವಾಗಿ ಯಾವುದೇ ಉತ್ತರವನ್ನು ನೀಡಿರುವುದಿಲ್ಲ.

**34.** 1 ನೇ ಆರೋಪಿ ಪರ ವಕೀಲರು ಹೊಲಕ್ಕೆ ಅಳವಡಿಸಿದ ಸೋಲಾರ ತಂತಿ ಮಾನವ ಜೀವಕ್ಕೆ ಅಪಾಯಕಾರಿ ಆಗಿರುವುದಿಲ್ಲ. ಹಾಗಾಗಿ ಸೋಲಾರ್ ತಂತಿಯನ್ನು ಮುಟ್ಟಿದರೆ ಮನುಷ್ಯನ

ಸಾವು ಆಗುವು ಸಂಭವ ಇರುವುದಿಲ್ಲ ಎಂದು ವಾದ ಮಾಡಿಸಿರುತ್ತಾರೆ. ಹಾಗಾಗಿ 1 ನೇ ಆರೋಪಿತನ ತಪ್ಪಿನಿಂದ ಸದರಿ ಘಟನೆಯೂ ಆಗಿರುವುದಿಲ್ಲ ಎಂದು ಅವರು ವಾದ ಮಂಡಿಸಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ಸದರಿ ಘಟನೆಯು 2 ದಿನಗಳ ಹಿಂದೆ ಭಾರಿ ಮಳೆಯಾಗಿತ್ತು ಮತ್ತು ಜೋರು ಗಾಳಿ ಬಂದಿದ್ದರಿಂದ ಪಕ್ಕದ ಹೊಲ ಶಿವನಗೌಡ ಇವರ ಹೊಲದಲ್ಲಿ ಕೆ.ಇ.ಬಿ ಕಂಬಗಳು ಬಿದ್ದಿದ್ದು, ಅದರ ವಿದ್ಯುತ್ ತಂತಿಯ ವೈರು 1 ನೇ ಆರೋಪಿತನ ಹೊಲಕ್ಕೆ ಅಳವಡಿಸಿದ ಸೋಲಾರ್ ತಂತಿ ಮೇಲೆ ಬಿದ್ದು ವಿದ್ಯುತ್ ಪ್ರವಹಿಸಿರುವ ವಿಷಯ ಸದರಿ 1 ನೇ ಆರೋಪಿತನಿಗೆ ತಿಳಿದಿದ್ದರು. ಅವನು ಸಂಬಂಧಪಟ್ಟ ಕೆ.ಇ.ಬಿ ಅಧಿಕಾರಿಗಳಿಗೆ ತಿಳಿಸಿ ಅದನ್ನು ಸರಿಪಡಿಸಲು ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ ಎಂದು ಪ್ರಾಸಾ-2,3 ಮತ್ತು 7 ಹಾಗೂ 8 ರವರು ತಮ್ಮ ಪಾಟೀ ಸವಾಲಿನಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈ ಅಂಶದ ಬಗ್ಗೆ 1 ನೇ ಅರೂಪಿ ಪರ ವಕೀಲರು ಸೋಲಾರ್ ತಂತಿಯನ್ನು ಮೂಟ್ಟಿದರೆ ಯಾವುದೇ ಪ್ರಾಣಕ್ಕೆ ಅಪಾಯ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ. ಆದರೆ ಕೆ.ಇ.ಬಿ ಕಂಬದ ತಂತಿ ಸೋಲಾರ್ ತಂತಿಯ ಮೇಲೆ ಬಿದ್ದಿದ್ದರಿಂದ ಸದರಿ ಸೋಲಾರ್ ತಂತಿಯನ್ನು ಮುಟ್ಟಿದರೆ ಅದು ಪ್ರಾಣಕ್ಕೆ ಅಪಾಯಕಾರಿಯಾಗುವ ವಿದ್ಯುತ್ ಪ್ರವಹಿಸಿ ಪ್ರಾಣಕ್ಕೆ ಅಪಾಯಕಾರಿಯಾಗುವ ಸಾಧ್ಯತೆಗಳು ಇದೆ ಎಂದು 1 ನೇ ಆರೋಪಿತನಿಗೆ ಗೊತ್ತಿದ್ದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ಇರುವುದು ಕಂಡುಬಂದಿರುತ್ತದೆ. ಮೃತ ಶರಣಬಸವ ಈ ತನಿಗೆ ವಿದ್ಯುತ್ ಪ್ರವಹಿಸಿ ಸಾವು ಸಂಭವಿಸಿರುತ್ತದೆ ಎಂದು ವೈದ್ಯಾಧಿಕಾರಿಗಳಾದ ಚಾಸಾ-10 ರವರು ನಿ.ಪಿ-5 ರಂತಿರುವ ಶವಪರೀಕ್ಷೆ ವರದಿಯಲ್ಲಿ ಸ್ಪಷ್ಟವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಹಾಗಾಗಿ ಮೃತ ಶರಣಬಸವ ಈತನ ಸಾವು ವಿದ್ಯುತ್ ಪ್ರವಹಿಸಿ ವಿದ್ಯುತ್ ಶಾಖ ಆಗಿರುವುದರಿಂದ ಆತನ ಮೃತ್ಯುವು ಸಂಭವಿಸಿರುತ್ತದೆ ಎಂದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

**35.** ಮರಣೋತ್ತರ ಪರೀಕ್ಷೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ತೆಗೆಸಿದ ಮೃತ ಶರಣಬಸವ ಎರಡು ಛಾಯಾಚಿತ್ರಗಳನ್ನು ಪ್ರಾಸಾ-10 ಸಾಕ್ಷ್ಯದಾರರು ನಿ.ಪಿ-6 ಮತ್ತು 7 ರಂತೆ ಗುರುತಿಸಿಕೊಂಡಿರುತ್ತಾರೆ. ನಿ.ಪಿ-5 ರಂತಿರುವ ಶವಪರೀಕ್ಷಾ ವರದಿಯನ್ನು ಪರಿಶೀಲನೆ ಮಾಡಿದಾಗ ಮೃತ ಶರಣಬಸವನ ಬಲ ಮೊಣ ಕೈ ಮತ್ತು ತಲೆಯ ಕೆಳಗಡೆ ಕತ್ತಿನ ಭಾಗದಲ್ಲಿ ಸುಟ್ಟ ಗಾಯಗಳು ಆಗಿ ಕಪ್ಪು ಬಣ್ಣ ಗಾಯಗಳು ಆಗಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಈ ಕುರಿತು ಪ್ರಾಸಾ-10 ರವರು ಮುಖ್ಯ ವಿಚಾರಣೆಯಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಸದರಿ ಮೃತ ಶರಣಬಸವನ ಮರಣ

ಹೊಂದುವುದಕ್ಕೆ ಕಾರಣ ವಿದ್ಯುತ್ ಪ್ರವಹಿಸಿ ವಿದ್ಯುತ್ ಶಾಖಿನಿಂದ ಸದರಿ ಹುಡುಗನ ಮರಣ ಆಗಿರುತ್ತದೆ ಎಂದು ಅವರು ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆ ಕಾರಣ ಮೃತ ಶರಣಬಸವನು 1 ನೇ ಆರೋಪಿತನ ಹೊಲದಲ್ಲಿ ಅಳವಡಿಸಿದ ಸೋಲಾರ್ ತಂತಿಯನ್ನು ದಾಟುತ್ತಿದ್ದಾಗ ಆತನಿಗೆ ವಿದ್ಯುತ್ ಕೆ.ಇ.ಬಿ ಕಂಬದಿಂದ ವಿದ್ಯುತ್ ಸೋಲಾರ್ ತಂತಿಯ ಮೇಲೆ ಪ್ರವಹಿಸಿ ಆತನಿಗೆ ವಿದ್ಯುತ್ ಶಾಕ್ ತೆಗಿಲಿಯೇ ಆತನು ಸ್ಥಳದಲ್ಲಿಯೇ ಮರಣ ಹೊಂದಿರುತ್ತಾನೆ ಎಂದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

**36.** 1 ನೇ ಆರೋಪಿತನು ಸದರಿ ಸೋಲಾರ್ ತಂತಿ ಅಳವಡಿಸಿದ ಹೊಲದ ಮಾಲೀಕನಾಗಿದ್ದನು. 2 ನೇ ಆರೋಪಿತನು ಸದರಿ ಹೊಲವನ್ನು ಲೀಸ್ ಮಾಡುವವನಾಗಿದ್ದು, 2 ನೇ ಆರೋಪಿತನು ಮರಣ ಹೊಂದಿರುತ್ತಾನೆ. ಆತನ ವಿರುದ್ಧ ಪ್ರಕರಣ ರದ್ದಾಗಿರುತ್ತದೆ. 3 ನೇ ಆರೋಪಿತನು ಕೆ.ಇ.ಬಿ ಲೈನ್ ಮ್ಯಾನ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, 3 ನೇ ಆರೋಪಿತನು ಈ ಪ್ರಕರಣ ವಿಚಾರಣೆ ಹಂತದಲ್ಲಿ ಮರಣ ಹೊಂದಿರುತ್ತಾನೆ. 1 ನೇ ಆರೋಪಿತನು ಹೊಲದ ಮಾಲೀಕನಾಗಿದ್ದು ಸದರಿ ಸೋಲಾರ್ ತಂತಿಗಳನ್ನು ಅಳವಡಿಸಲು ಸೂಕ್ತ ಪ್ರಾಧಿಕಾರದಿಂದ ಯಾವುದೇ ಅನುಮತಿಯನ್ನು ಪಡೆದುಕೊಳ್ಳದೆ ಅಕ್ರಮವಾಗಿ ಸೋಲರ ತಂತಿಗಳನ್ನು ಅಳವಡಿಸಿರುತ್ತಾನೆ ಎಂದು ತನಿಖಾಧಿಕಾರಿಗಳಾದ ಪ್ರಾಸಾ-11 ರವರು ಸದರಿ ವಿಚಾರವನ್ನು ಪಾಟೀ ಸವಾಲ್ಲಿನಲ್ಲಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಈ ರೀತಿ 1 ನೇ ಆರೋಪಿತನು ಸಂಬಂಧಪಟ್ಟ ಪ್ರಾಧಿಕಾರದಿಂದ ಸೋಲಾರ್ ತಂತಿಗಳನ್ನು ತನ್ನ ಹೊಲದಲ್ಲಿ ಅಳವಡಿಸಲು ಯಾವುದೇ ಪರವಾನಗಿಯನ್ನು ಪಡೆದೆ ಅಕ್ರಮವಾಗಿ ಅಳವಡಿಸಿದ್ದು, ಸೋಲಾರ್ ತಂತಿಯಿಂದ ವಿದ್ಯುತ್ ಪ್ರವಹಿಸುವುದಿಲ್ಲ, ಅದು ಮಾನವ ಜೀವನಕ್ಕೆ ಅಪಾಯಕಾರಿಯಾಗುವುದಿಲ್ಲ ಎಂದು ಗೊತ್ತಿದ್ದು. ಆದರೆ ಸದರಿ ಕೆ.ಇ.ವಿ ಕಂಬಗಳು ಘಟನೆಯಾಗುವ 2 ದಿನಗಳ ಹಿಂದೆ ಸೋಲರ್ ತಂತಿಯ ಮೇಲೆ ಬಿದ್ದಿದ್ದರು. 1 ನೇ ಆರೋಪಿತನು ಸದರಿ ಸೋಲಾರ್ ತಂತಿ ಅಳವಡಿಸಿದ ಹೊಲದ ಮಾಲೀಕನಾಗಿದ್ದು. ಸಂಬಂಧಪಟ್ಟ ಅಧಿಕಾರಿಗಳಿಗೆ ಸದರಿ ವಿಷಯವನ್ನು ತಿಳಿಯಿಸದೆ ಮಾನವ ಜೀವನಕ್ಕೆ ಸದರಿ ಸೋಲಾರ್ ತಂತಿ ಮುಟ್ಟಿದರೆ ಅಪಾಯಕರಿಯಾಗಿರುತ್ತದೆ ಎಂದು ಗೊತ್ತಿದ್ದರೂ ಯಾವುದೇ ಸೂಕ್ತ ಕ್ರಮವನ್ನು ತೆಗೆದುಕೊಳ್ಳದೆ ಇರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಇದರಿಂದ 1 ನೇ ಆರೋಪಿತನು ನಿರ್ಲಕ್ಷತನ ವಹಿಸಿ ಸೋಲಾರ್ ತಂತಿಯ ಮೇಲೆ ಕೆ.ಇ.ಬಿ ಕಂಬದ ತಂತಿ ಬಿದ್ದಿದ್ದರ ವಿಷಯ ಗೊತ್ತಿದ್ದರೂ ಆತನು ಸದರಿ ಸೋಲಾರ್ ತಂತಿ ಮಾನವ

ಜೀವಕ್ಕೆ ಅಪಾಯಕಾರಿಯಾಗಿರುತ್ತದೆ ಎಂಬ ವಿಷಯ ಗೊತ್ತಿದ್ದರೂ ಯಾವುದೇ ಸೂಕ್ತ ಕ್ರಮ ತೆಗೆದುಕೊಳ್ಳದೆ ನಿರ್ಲಕ್ಷ್ಯತನ ವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

**37.** ಪ್ರಕರಣದ ಸ್ಥಳ ಪಂಚನಾಮೆಯ ಪಂಚಸಾಕ್ಷಿದಾರರಾದ ಹಾಗೂ ಶವಪರೀಕ್ಷಾ ವರದಿಯ ಪಂಚಸಾಕ್ಷಿದಾರರಾದ ಪ್ರಾಸಾ-7 ಮತ್ತು 8 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-5 ರಂತಿರುವ ನಿಪಿ-3 ರಂತಿರುವ ಪಂಚನಾಮೆ ಮತ್ತು ನಿಪಿ-2 ರಂತಿರುವ ಶವಪಂಚನಾಮೆಯ ಅಂಶಗಳ ಬಗ್ಗೆ ಪೂರಕವಾದ ಸಾಕ್ಷ್ಯವನ್ನು ನುಡಿದಿದ್ದು, ಪ್ರಾಸಾ-8 ರವರು ಪಂಚನಾಮೆಗೆ ಹೆಬ್ಬೆಟ್ಟಿನ ಸಹಿಯನ್ನು ಮಾಡಿರುವುದಾಗಿ ತಿಳಿಸಿದ್ದು, ಪಂಚನಾಮೆಯಲ್ಲಿ ಅವರ ಹೆಸರು ಮತ್ತು ತಂದೆ ಹೆಸರು ವಿಳಾಸ ಇರುವುದು ಅವರು ಗುರುತಿಸಿರುತ್ತಾರೆ ಆದರೆ ಅವರ ಸಹಿ ಇರುವುದನ್ನು ಅವರು ಗುರುತಿಸಿರುವುದಿಲ್ಲ. ಇದೇ ಕಾರಣಕ್ಕಾಗಿ ಅವರು ಮಹಜರ್ ಮಾಡುವ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ ಎಂದು ಪರಿಗಣಿಸಲು ಬರುವುದಿಲ್ಲ. ಆದರೆ ಮತ್ತೊಬ್ಬ ಪಂಚಸಾಕ್ಷಿದಾರರಾದ ಪ್ರಾಸಾ-7 ರವರು ನಿಪಿ-2 ರಂತಿರುವ ಶವಪಂಚನಾಮೆಯ ಅಂಶಗಳ ಮತ್ತು ನಿಪಿ-3 ರಂತಿರುವ ಸ್ಥಳಪಂಚನಾಮೆಯ ಅಂಶಗಳ ಬಗ್ಗೆ ಪೂರಕವಾಗಿರುವಂತಹ ಸಾಕ್ಷ್ಯವನ್ನು ನುಡಿದಿರುತ್ತಾರೆ. ಸದರಿ ಸಾಕ್ಷ್ಯದಾರರು ಪಾಟೀ ಸಾವಲ್ಲಿನಲ್ಲಿ ಅವರಿಗೆ ವಿಷಯವನ್ನು ಓದಿ ಹೇಳಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಆದರೆ ಸದರಿ ಅಂಶವು ಪಂಚನಾಮೆಯ ಅಂಶಗಳ ವಿರುದ್ಧವಾಗಿರುವುದಿಲ್ಲ ಎಂದು ಪರಿಗಣಿಸಿ ಅವರ ಸಮಕ್ಷಮ ಪಂಚನಾಮೆ ಮಾಡುವ ಕಾಲಕ್ಕೆ ಪ್ರಾಸಾ-7 ಮತ್ತು 8 ರವರು ಹಾಜರಿದ್ದರು ಮತ್ತು ತನಿಖಾಧಿಕಾರಿಗಳ ಪ್ರಾಸಾ-11 ರವರು ಪಂಚನಾಮೆಯ ಅಂಶಗಳ ಬಗ್ಗೆ ಪೂರಕವಾಗಿರುವಂತ ಸಾಕ್ಷ್ಯವನ್ನು ನುಡಿದಿರುವುದರಿಂದ ಸದರಿ ಪಂಚನಾಮೆ ನಿಪಿ-2 ಮತ್ತು 3 ರಂತಿರುವ ಪಂಚನಾಮೆ ಅಂಶಗಳನ್ನು ಸಾಬೀತುಪಡಿಸುವುದರಲ್ಲಿ ಅಭಿಯೋಜನೆಯವರು ಸಾಬೀತುಪಡಿಸಿರುತ್ತಾರೆ.

**38.** ಈ ರೀತಿ 1 ನೇ ಆರೋಪಿತನು ಈ ರೀತಿ ಘಟನೆಯಾಗುವ 2 ದಿನಗಳ ಹಿಂದೆ ಭಾರಿ ಮಳೆಯಾಗಿ ಕೆ.ಇ.ಬಿ ಕಂಬ ಬಾಗಿ ಸೋಲರ್ ತಂತಿಯ ವಯರ್‌ಗಳ ಮೇಲೆ ಬಿದ್ದು ವಿದ್ಯುತ್ ಪ್ರವಹಿಸಿರುವ ವಿಷಯ ಆತನಿಗೆ ಗೊತ್ತಿದ್ದರೂ ಆತನು ನಿರ್ಲಕ್ಷ್ಯತನವನ್ನು ವಹಿಸಿ ಸದರಿ ಮಾಹಿತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದೆ ಸೋಲರ್ ತಂತಿ ಹಾಗೇ ವಿದ್ಯುತ್ ಪ್ರವಹಿಸುತ್ತಿರುವ ವಿಷಯವನ್ನು ಹಾಗೆಯೇ ನಿರ್ಲಕ್ಷತೆಯಿಂದ ವಹಿಸಿ ಯಾವುದೇ ಕ್ರಮವನ್ನು

ತೆಗೆದುಕೊಳ್ಳದೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸದೇ ಇರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ. ಆ ಕಾರಣ ಸೋಲಾರ್ ತಂತಿಯನ್ನು ಮುಟ್ಟಿದರೆ ವಿದ್ಯುತ್ ಪ್ರವಹಿಸಿ ಮನುಷ್ಯನ ಸಾವು ಆಗುವ ಸಾಧ್ಯತೆಗಳು ಇರುತ್ತದೆ ಎಂದು ಆತನಿಗೆ ಗೊತ್ತಿದ್ದಿರುತ್ತದೆ. ಆದರೂ ಯಾವುದೇ ಕ್ರಮವನ್ನು ತೆಗೆದುಕೊಳ್ಳದೆ ನಿರ್ಲಕ್ಷ್ಯತೆಯನ್ನು ವಹಿಸಿರುವುದು ಸ್ಪಷ್ಟವಾಗಿ ಕಂಡುಬಂದಿರುತ್ತದೆ.

***According to the Hon'ble Supreme Court of India, Crl Appeal No.2008 in the (Arising out of S.L.P. (Crl.) No.1944 of 2008) Kuldeep Singh ... Appellant Vs. State of Himachal Pradesh ... Respondent it is held that***

***9. What constitutes negligence has been analysed in Halsbury's Laws of England (4th Edition) Volume 34 paragraph 1 (para 3) as follows: "Negligence is a specific tort and in any given circumstances is the failure to exercise that care which the circumstances demand. What amounts to negligence depends on the facts of each particular case. It may consist in omitting to do something which ought to be done or in doing something which ought to be done either in a different manner or not at all. Where there is no duty to exercise care, negligence in the popular sense has no legal consequence, where there is a duty to exercise care, reasonable care must be taken to avoid acts or omissions which can be***

***reasonably foreseen to be likely to cause physical injury to persons or property. The degree of care required in the particular case depends on the surrounding circumstances, and may vary according to the amount of the risk to be encountered and to the magnitude of the prospective injury. The duty of care is owed only to those persons who are in the area of foreseeable danger, the fact that the act of the defendant violated his duty of care to a third person does not enable the plaintiff who is also injured by the same act to claim unless he is also within the area of foreseeable danger. The same act or omission may accordingly in some circumstances involve liability as being negligent although in other circumstances it will not do so. The material considerations are the absence of care which is on the part of the 8 defendant owed to the plaintiff in the circumstances of the case and damage suffered by the plaintiff, together with a demonstrable relation of cause and effect between the two".***

***10. In this context the following passage from Kenny's Outlines of Criminal Law, 19th Edition***

***(1966) at page 38 may be usefully noted : "Yet a man may bring about an event without having adverted to it at all, he may not have foreseen that his actions would have this consequence and it will come to him as a surprise. The event may be harmless or harmful, if harmful, the question rises whether there is legal liability for it. In tort, (at common law) this is decided by considering whether or not a reasonable man in the same circumstances would have realised the prospect of harm and would have stopped or changed his course so as to avoid it. If a reasonable man would not, then there is no liability and the harm must lie where it falls. But if the reasonable man would have avoided the harm then there is liability and the perpetrator of the harm is said to be guilty of negligence. The word 'negligence' denotes, and should be used only to denote, such blameworthy inadvertence, and the man who through his negligence has brought harm upon another is under a legal obligation to make reparation for it to the victim of the 9 injury who may sue him in tort for damages. But it should now be recognized that at common law***

*there is no criminal liability for harm thus caused by inadvertence. This has been laid down authoritatively for manslaughter again and again. There are only two states of mind which constitute mens rea and they are intention and recklessness. The difference between recklessness and negligence is the difference between advertence and inadvertence they are opposed and it is a logical fallacy to suggest that recklessness is a degree of negligence The common habit of lawyers to qualify the word "negligence" with some moral epithet such as wicked' `gross' or `culpable' has been most unfortunate since it has inevitably led to great confusion of thought and of principle. It is equally misleading to speak of criminal negligence since this is merely to use an expression in order to explain itself." 11. "Negligence", says the Restatement of the law.*

*11. "Negligence", says the Restatement of the law of Torts published by the American Law Institute (1934) Vol. I. Section 28 "is conduct which falls below the standard established for the protection of others against unreasonable*

***risk of harm". It is stated in Law of Torts by Fleming at page 124 (Australian Publication 1957) that this standard of conduct is ordinarily measured by what the reasonable man of ordinary prudence 10 would do under the circumstances. In Director of Public Prosecutions v. Camplin (1978) 2 All ER 168 it was observed by Lord Diplock that "the reasonable man" was comparatively late arrival in the laws of provocation. As the law of negligence emerged in the first half of the 19th century it became the anthropomorphic embodiment of the standard of care required by law. In order to objectify the law's abstractions like "care" "reasonableness" or "foreseeability" the man of ordinary prudence was invented as a model of the standard of conduct to which all men are required to conform.***

***12. In Syed Akbar v. State of Kamataka, (1980) 1 SCC 30, it was held that "where negligence is an essential ingredient of the offence, the negligence to be established by the prosecution must be culpable or gross and not the negligence merely based upon an error of judgment. As pointed out by Lord Atkin in***

***Andrews v. Director of Public Prosecutions (1937) (2) All ER 552) simple lack of care such as will constitute civil liability, is not enough; for liability under the criminal law a very high degree of negligence is required to be proved. 11 Probably, of all the epithets that can be applied 'reckless' most nearly covers the case. "***

***13. According to the dictionary meaning `reckless' means `careless', `regardless' or heedless of the possible harmful consequences of one's acts'. It presupposes that if thought was given to the matter by the doer before the act was done, it would have been apparent to him that there was a real risk of its having the relevant harmful consequences; but, granted this, recklessness covers a whole range of states of mind from failing to give any thought at all to whether or not there is any risk of those harmful consequences, to recognizing the existence of the risk and nevertheless deciding to ignore it. In R. v. Briggs (1977) 1 All ER 475 it was observed that a man is reckless in the sense required when he carries out a deliberate act knowing that there is some risk of damage***

***resulting from the act but nevertheless continues in the performance of that act.***

***14. In R. v. Caldwell (1981) 1 All ER 961, it was observed that:- "Nevertheless, to decide whether someone has been `reckless', whether harmful consequences of a particular kind will result from his act, as distinguished from his actually intending such harmful consequences to follow, does call for some consideration of how the mind of the ordinary prudent individual would have reacted to a similar situation. If there were nothing in the circumstances that ought to have drawn the attention of an ordinary prudent individual to the possibility of that kind of harmful consequence, the accused would not be described as `reckless' in the natural meaning of that word for failing to address his mind to the possibility; nor, if the risk of the harmful consequences was so slight that the ordinary prudent individual on due consideration of the risk would not he deterred from treating it as negligible, could the accused be described as reckless in its ordinary sense, if, having considered the risk, he decided to ignore it. (In***

***this connection the gravity of the possible harmful consequences would be an important factor. To endanger life must be one of the most grave). So, to this extent, even if one ascribes to 'reckless' only the restricted meaning adopted by the Court of Appeal in Stephenson and Briggs, of foreseeing that a particular kind of harm might happen and yet going on to take the risk of it, it involves a test that would be described in part as 'objective' in current legal jargon. Questions of criminal 13 liability are seldom solved by simply asking whether the test is subjective or objective."***

***15. The decision of R. v Caldwell (Supra) has been cited with approval in R v. Lawrence (1981) 1 All ER 974 and it was observed that:***

***"--- Recklessness on the part of the doer of an act does presuppose that there is something in the circumstances that would have drawn the attention of an ordinary prudent individual to the possibility that his act was capable of causing the kind of serious harmful consequences that the section which creates the offence was intended to prevent, and that the risk of those harmful consequences***

***occurring was not so slight that an ordinary prudent individual would feel justified in treating them as negligible. It is only when this is so that the doer of the act is acting `recklessly' if, before doing the act, he either fails to give any thought to the possibility of there being any such risk or, having recognized that there was such risk, he nevertheless goes on to do it".***

***16. The above position was highlighted in Naresh Giri v. State of M.P. [2008(1) SCC 791].***

**39**. ಸಾಮಾನ್ಯವಾಗಿ ಅಪಘಾತದ ಪ್ರಕರಣದಲ್ಲಿ ಮಹಜರ್ ರುಜುವಾತು ಮಾಡಲೇಬೇಕೆಂಬ ಅವಶ್ಯಕತೆ ಇರುವುದಿಲ್ಲ. ಹೆಚ್ಚಿನದಾಗಿ ಈ ಪ್ರಕರಣದಲ್ಲಿ ಅಪಘಾತ ಸ್ಥಳ, ಆ ಸಮಯದಲ್ಲಿ ಆರೋಪಿ ತನ್ನ ಹೊಲದಲ್ಲಿ ಸೊರ್ ತಂತಿಂಗಳನ್ನು ಅಳವಡಿಸಿಕೊಂಡಿರುವುದಿಲ್ಲ ಎಂಬುದನ್ನು ಆರೋಪಿ ಪರವಾಗಿ ಎಲ್ಲಿಯು ಅಲ್ಲಗಳೆದಿರುವುದಿಲ್ಲ.

ಈಗಾಗಲೇ ಹೇಳಿದಂತೆ ಈ ಪ್ರಕರಣದ ಪ್ರಾಸಾ.2 ರಿಂದ 8 ರವರು ಆರೋಪಿತನೇ ಆ ದಿನ ತನ್ನ ಹೊಲದಲ್ಲಿ ಸೊರ್ ತಂತಿಂಗಳನ್ನು ಅಳವಡಿಸಿಕೊಂಡಿದ್ದನು ಮತ್ತು ಸದರಿ ಸೋಲಾರ್ ತಂತಿಗಳನ್ನು ಮೃತ ಶರಣಬಸವನಿಗೆ ತಾಗಿ ಆತನಿಗೆ ವಿದ್ಯುತ್ ಶಾಖ ಆಗಿ ಸಾವು ಸಂಭವಿಸಿರುತ್ತದೆ ಎಂಬುದನ್ನು ಸ್ಪಷ್ಟವಾಗಿ ನುಡಿದಿರುತ್ತಾರೆ. ಇನ್ನು ಅಪಘಾತವಾಗಿದ್ದು ಹಾಗೂ ಸದ್ರಿ ಹೊಲದ ಮಾಲೀಕನ ಅಜಾಗರೂಕತೆಯಿಂದ ಬಂದು ಅಪಘಾತ ಆಗಿರುವುದ್ದನ್ನು ಈಗಾಗಲೇ ಮೇಲೆ ಹೇಳಿದಂತೆ ಸ್ಪಷ್ಟವಾಗಿ ನುಡಿದಿರುತ್ತಾರೆ. ಉಳಿದೆಲ್ಲಾ ಸಾಕ್ಷಿದಾರರು ಇಂತಹ ಸಚಿದರ್ಭದಲ್ಲಿ ಆರೋಪಿ ಸದ್ರಿ ಅಂಶಗಳನ್ನು ಅಲ್ಲಗಳೆಯುವಂತಹ ಪ್ರಯತ್ನವನ್ನು ತನ್ನ ಪರವಾಗಿ ಮಾಡಬೇಕಾಗುತ್ತದೆ. ಆರೋಪಿತನಿಗೆ ಅಭಿಯೋಜನೆ ಪ್ರಕರಣದ ಎಲ್ಲಾ ವಿಚ್ಛರಣೆ ಮುಗಿದ ನಂತರ

ತನ್ನ ಪ್ರತಿರಕ್ಷಣೆಯ ನಿಲುವನ್ನು ಸಮರ್ಥಿಸಿಕೊಳ್ಳುವಂತಹ ಅವಕಾಶ ದಂ. ಪ್ರ.ಸಂ.ಕಲಂ. 313 ರ ಅಡಿಯಲ್ಲಿ ಇರುತ್ತದೆ. ಆದರೆ, ಈ ಪ್ರಕರಣದಲ್ಲಿ ಆರೋಪಿ ಕೇವಲ ನ್ಯಾಯಾಲಯ ಓದಿ ಹೇಳಿದ ಅಭಿಯೋಜನೆ ಪರವಾಗಿ ಎಲ್ಲಾ ಸಾಕ್ಷ್ಯವನ್ನು ಅಲ್ಲಗಳೆದಿರುವುದನ್ನು ಬಿಟ್ಟರೆ, ತನ್ನ ಪರವಾಗಿ ಯಾವುದೇ ಒಚಿದು ಸಂಗತಿಯನ್ನು ಸಂದರ್ಭದಲ್ಲಿ ಆರೋಪಿತನ ವಿರುದ್ದ ಸಹ ಉಚ್ಚರಿಸಿರುವುದಿಲ್ಲ, ಇಚಿತಹ ಪೂರ್ವಭಾವನೆ ತಾಳಬಹುದು ಎಂಬುದು ಕ್ರಿಮಿನಲ್ ತತ್ವ ಶಾಸ್ತ್ರದ ಮುಖ್ಯ ಉದ್ದೇಶವಾಗಿರುತ್ತದೆ. ಈ ಪ್ರಕರಣದಲ್ಲಿ ಕೆಲವು ಸಾಕ್ಷಿದಾರರು ಭಾಗಶಃ ಪ್ರತಿಕೂಲ ಸಾಕ್ಷಿಗಳಾಗಿದ್ದರೂ ಸಹ, ಇನ್ನು ಕೆಲವು ಪ್ರತ್ಯಕ್ಷ ಸಾಕ್ಷಿದಾರರು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನ್ಮಡಿದಿರುತ್ತಾರೆ. ಕೆಲವು ಸಾಕ್ಷಿದಾರರ ಹೇಳಿಕೆಯಲ್ಲಿ ಸಣ್ಣ ಪುಟ್ಟ ವ್ಯತಿರಿಕ್ತತೆಗಳು ಕಂಡು ಬಂದಿದ್ದರೂ ಸಹ ಅವುಗಳು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿರುವುದಿಲ್ಲ, ಈ ಬಗ್ಗೆ ಈ ಕೆಳಗಿನ ತೀರ್ಪನ್ನು ಉಲ್ಲೇಖಿಸಬಹುದಾಗಿದೆಃ ***2004 (3) KCCR 1799***

***IN between M.Nagaraj V/s White field police Bengaluru. B. – Criminal Trial – Offences section 279, 337, 338 and 304-A under of IPC. Minor ommissions and contradictions. – No case is freee from minor ommissions and contradictions. The entire gist of the evidence of the prosecution witness is to be taken into consideration in coming to the just conclusion.***

**40.** ಈ ಸಂಬಂಧ ನಿಪಿ.1 ರಿಂದ 14, ಮುಖ್ಯವಾಗಿ ನಿಪಿ.10 ರಿಂದ 11 ನ್ನು ಗಮನಿಸಿದಾಗ ಆರೋಪಿ ತನ್ನ ಹೊಲದಲ್ಲಿ ಸೋಲರಿ ತಂತಿಗಳನ್ನು ಅಕ್ರಮವಾಗಿ ಅಳವಡಿಸಿದ್ದು ಕೆಇಬಿ ಕಂಬದ ತಂತಿಗಳು ಭಾಗಿ ಸೋಲಾರ್ ತಂತಿ ಮೇಲೆ ಬಿದ್ದಿರುವುದು ಕಂಡು ಬರುತ್ತದೆ. ಆದರೆ ಆತ ಈ ಬಗ್ಗೆ ತನ್ನ ವಿವರಣೆ ನೀಡುವ ಭಾದ್ಯತೆ ಹೊಂದಿರುತ್ತಾನೆ. ಆದರೆ ಈ ಪ್ರಕರಣದಲ್ಲಿ ಆತ ಯಾವುದೇ ರೀತಿಯ ವಿವರಣೆಯನ್ನು ನೀಡಿರುವುದಿಲ್ಲ, ಈ ಸಂಬಂಧ

ಮೇಲೆ ಉಲ್ಲೇಖಿಸಲಾದ ಸದ್ರಿ ಪ್ರಕರಣದಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ತಳೆದಿರುವುದು ಕಂಡು ಬರುತ್ತದೆ.

36. ಆರೋಪಿಯು ಅಪಘಾತದ ಕುರಿತು ಸಾಕ್ಷ್ಯದಲ್ಲಿ ತನ್ನ ವಿರುದ್ದ ಬಂದಿರುವ ಸಂದರ್ಭವನ್ನು ವಿವರಿಸುವ ಹೊಣೆಗಾರಿಕೆ ಹೊಂದಿದ್ದು, ಆದರೆ ಈ ಪ್ರಕರಣದಲ್ಲಿ ಆರೋಪಿ ದಂ.ಪ್ರ.ಸಂ.ಕಲಂ. 313 ರ ಹೇಳಿಕೆಯಲ್ಲಿ ಏನನ್ನೂ ಹೇಳಿರುವುದಿಲ್ಲ, ಆದುದರಿಂದ ಆರೋಪಿಯ ವಿರುದ್ದ ಪ್ರತಿಕೂಲ ನಿಲುವನ್ನು ಹೊಂದಬಹುದು. ಈ ಕುರಿತು ಈ ಕೆಳಗಿನ ತೀರ್ಪನ್ನು ಉಲ್ಲೇಖಿಸಬಹುದಾಗಿದೆ.

> ***ILR 2004 Kar. 1459 IN between Eshwar Sadappa Nandennanawar V/s State of Karnataka B. Criminal procedure code 1973- section 313 – Powers of court to examine accused – absolutely no explaination having been offered by the accused while he had opportunity of explaining when questioned under sec. 313, Held, it is necessary for the accused even in case where entire case of the prosecution revolves around circumstantial evidence. If the other circumstances are proved prima facie by the prosecution to explian any circumstances appearing in the evidence against him. C. Evidence Act 1872 section 102 – Burden of proving fact – especially within the knowledge of examination of accused under sec. 313 of Cr.P.C.- Held a person like a driver***

***of a offending vehicle has been called out for having special knowledge of the occurence and if he does not explian the same, when he has been given a last opportunity while questioned[1]. under sec. 313 of Cr.P.C. After the prosecution has discharge his burden, prima facie – the courts are entitled to draw adverse inference.***

**41.** 1 ನೇ ಆರೋಪಿತನ ವಿರುದ್ಧ ಹೊರಿಸಲಾದ ಆರೋಪಗಳನ್ನು ರುಜುವಾತುಪಡಿಸಲು ಸಂಪೂರ್ಣವಾಗಿ ಸಫಲವಾಗಿರುತ್ತದೆ. ಆದ್ದರಿಂದ 1 ನೇ ಆರೋಪಿತನ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ 304(ಎ) ರಡಿಯಲ್ಲಿ ಆರೋಪವನ್ನು ಸಂಶಯಾತೀತವಾಗಿ ರುಜುವಾತು ಪಡಿಸಲು ಸಫಲರಾಗಿರುತ್ತಾರೆಂದು ಅಭಿಪ್ರಾಯ ಪಡುತ್ತೇನೆ. ಆದ್ದರಿಂದ ಮೇಲ್ಕಂಡ ಅಂಶಗಳನ್ನು ಸಕರಾತ್ಮಕವಾಗಿ ಉತ್ತರಿಸುತ್ತೇನೆ.

**42. ಅಂಶ ನಂಃ 2** ಃ ಮೇಲ್ಕಂಡ ಅಂಶಗಳ ಮೇಲೆ ಈ ನ್ಯಾಯಾಲಯವು ಮಾಡಿರುವ ನಿರ್ಣಯದ ಹಿನ್ನೆಲೆಯಲ್ಲಿ ಈ ಕೆಳಕಂಡತೆ ಆದೇಶವನ್ನು ಮಾಡಿರುತ್ತದೆ.

## ಃಃ ಆದೇಶ ಃಃ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(2) ಮತ್ತು ಬಿ.ಎನ್.ಎಸ್. ಎಸ್ ಕಲಂ 278(2) ರಡಿಯಲ್ಲಿ 1 ನೇ ಆರೋಪಿ ವಿರುದ್ಧ ಹೊರಿಸಲಾದ ಭಾರತೀಯ ದಂಡ ಸಂಹಿತೆ ಕಲಂ.304(ಎ) ರಡಿಯಲ್ಲಿನ ಆರೋಪಗಳಿಗೆ ದೋಷಿಯೆಂದು ತೀರ್ಮಾನಿಸಿದೆ.

1 ನೇ ಆರೋಪಿಯು ಭಾ.ದಂ.ಸಂ.ಕಲಂ 304(ಎ) ರ ಅಪರಾಧಕ್ಕೆ ಒಂದು ವರ್ಷ ಸಾಧ ಕಾರಾಗೃಹ ವಾಸ ಅನುಭವಿಸಲು ಮತ್ತು ರೂ.20,000/-ಗಳ ದಂಡವನ್ನು ಪಾವತಿಸಲು ನಿರ್ದೇಶಿಸಿದೆ. 1 ನೇ

ಆರೋಪಿ ದಂಡ ಪಾವತಿಸಲು ವಿಫಲರಾದಲ್ಲಿ ಮೂರು ತಿಂಗಳು ಹೆಚ್ಚುವರಿಯಾಗಿ ಸಾಧಾ ಕಾರಾಗೃಹ ವಾಸ ಶಿಕ್ಷೆ ಅನುಭವಿಸಲು ಸೂಚಿಸಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 363 ರನ್ವಯ 1 ನೇ ಆರೋಪಿಗೆ ತೀರ್ಪಿನ ಪ್ರತಿಯನ್ನು ಉಚಿತವಾಗಿ ನೀಡಲು ಆದೇಶಿಸಿದೆ.

1 ನೇ ಆರೋಪಿತನ ಮತ್ತು ಅವನ ಜಾಮೀನುದಾರರ ಮುಚ್ಚಳಿಕೆಯನ್ನು ಈ ಮೂಲಕ ರದ್ದುಗೊಳಿಸಿದೆ.

1 ನೇ ಆರೋಪಿತನ ಮತ್ತು ಅವನ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437 ಎ ರಡಿಯಲ್ಲಿ ಬರೆದುಕೊಟ್ಟಿರುವ ಮುಚ್ಚಳಿಕೆ ಪತ್ರವು 6 ತಿಂಗಳ ಕಾಲ ಅಸ್ತಿತ್ವದಲ್ಲಿರುತ್ತದೆ.

**(ಈ ಮೇಲಿನ ಆದೇಶವನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಕಂಪ್ಯೂಟರ್‌ನಲ್ಲಿ ಉಕ್ತಲೇಖನ ಕೊಟ್ಟು ಅವರು ಬೆರಳಚ್ಚು ಮಾಡಿದ ನಂತರ ಓದಿ, ತಿದ್ದಿ ಸಹಿ ಮಾಡಿ ದಿನಾಂಕಃ 01 ನೇ ಜುಲೈ-2026 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.)**

(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

**ಃ ಅನುಬಂಧ ಃ**

**1. ಅಭಿಯೋಜನೆಯ ಪರ ವಿಚಾರಣೆ ಮಾಡಿಕೊಂಡ ಸಾಕ್ಷಿದಾರರ ವಿವರಃ-**

ಪ್ರಾಸಾ-1 ಶಿವಪ್ಪ.
ಪ್ರಾಸಾ-2 ನಿಂಗಪ್ಪ.
ಪ್ರಾಸಾ-3 ಮಲ್ಲಪ್ಪ.
ಪ್ರಾಸಾ-4 ತಾಯಮ್ಮ.
ಪ್ರಾಸಾ-5 ಹೊನ್ನಪ್ಪ.
ಪ್ರಾಸಾ-6 ರಂಗಣ್ಣ.
ಪ್ರಾಸಾ-7 ಚನ್ನಪ್ಪ.
ಪ್ರಾಸಾ-8 ಹನುಮಂತ.
ಪ್ರಾಸಾ-9 ಬಸವರಾಜ.
ಪ್ರಾಸಾ-10 ಡಾ. ರಾಜಕುಮಾರ.
ಪ್ರಾಸಾ-11 ಬಸವರಾಜ.

**2. ಅಭಿಯೋಜನೆಯ ಪರ ಗುರುತಿಸಿಕೊಂಡ ದಾಖಲಾತಿಗಳ ವಿವರಃ-**

ನಿಪಿ-1 : ದೂರು.
ನಿಪಿ-1(ಎ) : ಪ್ರಾಸಾ-1 ರವರ ಸಹಿ.

ನಿಪಿ-1(ಬಿ) : ಪ್ರಾಸಾ-11 ರವರ ಸಹಿ.

ನಿಪಿ-2 : ಶವ ಪಂಚನಾಮೆ.
ನಿಪಿ-2(ಎ) : ಪ್ರಾಸಾ-7 ರವರ ಸಹಿ.

ನಿಪಿ-2(ಬಿ) : ಪ್ರಾಸಾ-11 ರವರ ಸಹಿ.

ನಿಪಿ-3 : ಅಪರಾಧ ವಿವರ ನಮೂನೆ.
ನಿಪಿ-3(ಎ) : ಪ್ರಾಸಾ-7 ರವರ ಸಹಿ.

ನಿಪಿ-3(ಬಿ) : ಪ್ರಾಸಾ-11 ರವರ ಸಹಿ.

ನಿಪಿ-4 : ಕರ್ತವ್ಯ ಪ್ರಮಾಣ ಪತ್ರ.
ನಿಪಿ-4(ಎ) : ಪ್ರಾಸಾ-9 ರವರ ಸಹಿ.

ನಿಪಿ-5 : ಶವ ಪರಿಕ್ಷೆ ವರದಿ.
ನಿಪಿ-5(ಎ) : ಪ್ರಾಸಾ-10 ರವರ ಸಹಿ.

ನಿಪಿ-5(ಬಿ) : ಪ್ರಾಸಾ-11 ರವರ ಸಹಿ.

ನಿಪಿ-6 ಮತ್ತು 7 : ಛಾಯಚಿತ್ರಗಳು.
ನಿಪಿ-8 : ಪ್ರಥಮ ವರ್ತಮಾನ ವರದಿ.
ನಿಪಿ-8(ಎ) : ಪ್ರಾಸಾ-11 ರವರ ಸಹಿ.

ನಿಪಿ-9 : ಸ್ವತ್ತಿನ ಪಟ್ಟಿ.
ನಿಪಿ-9(ಎ) : ಪ್ರಾಸಾ-11 ರವರ ಸಹಿ.

ನಿಪಿ-10 ರಿಂದ 14 : ಛಾಯಚಿತ್ರಗಳು.
ನಿಪಿ-15 : ಕರ್ತವ್ಯ ಪ್ರಮಾಣ ಪತ್ರ.

**3. ಆರೋಪಿತರ ಪರ ವಿಚಾರಿಸಿಕೊಂಡ ಸಾಕ್ಷಿದಾರರ ವಿವರ ಃ-**

ಇಲ್ಲಾ

**4. ಆರೋಪಿತರ ಪರ ಗುರುತಿಸಿಕೊಂಡ ದಾಖಲೆಗಳ ವಿವರ ಃ-**

ಇಲ್ಲಾ

**5. ಅಭಿಯೋಜನೆಯ ಪರ ಗುರುತಿಸಿಕೊಂಡ ಮುದ್ದೆ ಮಾಲಿನ ವಿವರ ಃ-**

ಇಲ್ಲಾ

(ಶ್ರೀ ರಫೀಕ್ ಅಹಮದ್)
**ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
ದೇವದುರ್ಗ.

Digitally signed by RAFEEQ AHMED M
Location: Civil Judge and JMFC,Devadurga